

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 230 | Tuesday 21-05-2024 | E-mail : maruti.b.hosamani76@gmail.com | Page: 4 | Price : Rs. 1/-







## ಕಾಂಗ್ರೆಸ್ ಸರ್ಕಾರ ಒಂದು ವರ್ಷದ ಅವಧಿಯಲ್ಲಿ ಐದು ಗ್ಯಾರಂಟಿಗಳ ಈಡೇರಿಸಿದ ಸಿ.ಎಂ ಹಾಗೂ ಡೆಪ್ಯೂಟಿ ಸಿ.ಎಂ ಇವರಿಗೆ ಅಭಿನಂದನೆ ಸಲ್ಲಿಸಿದ ಶಾಸಕರು

**ಮೊಳಕಾಲ್ಮುರು :** ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಇಂದಿಗೆ ಯಶಸ್ವಿಯಾಗಿ ಒಂದು ವರ್ಷ ಪೂರೈಸಿದೆ. ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಕೊಟ್ಟ ಭರವಸೆಗಳನ್ನು ಈಡೇರಿಸಿದೆ. ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ನಮ್ಮ ಜನರು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಅದು ನಮ್ಮ ಗ್ಯಾರಂಟಿ ಯೋಜನೆಗಳಿಗೆ ಸಿಕ್ಕ ಯಶಸ್ಸು. ಮುಂದೆಯೂ ನಮ್ಮ ಸರ್ಕಾರ ಸದೃಢ ಹಾಗೂ ಜನಪರ ಆಡಳಿತ ನೀಡಲಿದೆ. ನಿಮ್ಮೆಲ್ಲರ ಬೆಂಬಲ,ಆಶೀರ್ವಾದಸದಾಹೀಗೆ ಇರಲಿ. ನಿಮ್ಮ ಪ್ರೀತಿಯ ಶ್ರೀ ಎನ್ ವೈ ಗೋಪಾಲಕೃಷ್ಣ ಜನಪ್ರಿಯ ಶಾಸಕರು, ಮೊಳಕಾಲ್ಮೂರು ಎಂದು ವರದಿಯಾಗಿದೆ.

**ವರದಿಗಾ ರ ತಿಪ್ಪೆ ಸ್ವಾಮಿ ಎಸ್ ಕೆ ನ್ಯೂಸ್ ಮೊಳಕಾಲ್ಮೂರು ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ತಿಪ್ಪೇಸ್ವಾಮಿ. ಹೊಂಬಾಳೆ. ಮೊಳಕಾಲ್ಮುರು**

# ರೈತರ ಬೆಳೆ ವಿಮೆ, ತೊಗರಿ ನೆಟೆ ರೋಗ ಪರಿಹಾರ, ಹಾಗೂ ಬರಗಾಲ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹ

**ದೇವರ ಹಿಪ್ಪರಗಿ :** ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಸಂಬಂಧಿಸಿದಂತೆ ಸಾಕಷ್ಟು ರೈತರಿಗೆ ರಾಜ್ಯ ಹಾಗೂ ಕೇಂದ್ರದಿಂದ ಪ್ರತಿ ಹೆಕ್ಟೇರ್ ಗೆ 8500 + 8500 ರಂತೆ ಒಟ್ಟು 17000 ಹಾಕಬೇಕು ಆದ–ರೆ ರಾಜ್ಯ ಸರಕಾರ ಹಾಕಿರುವ 2000 ಹಣವನ್ನು ಸಹ ಮುರಿದು ಕೇವಲ 6500 ಪ್ರತಿ ಹೆಕ್ಟೇರ್ ಗೆ ಹಾಕುತ್ತಿದ್ದಾರೆ.

ತೊಗರಿ ನೆಟೆ ರೋಗದ ಪರಿಹಾರ ಕೇವಲ 4200 ಹಣ ಜಮಾ ಮಾಡಲಾಗಿ ಉಳಿದ ಬಾಕಿ ಹಣ ಜಮಾ ಮಾಡಬೇಕು.

ಅದೇ ರೀತಿ ಫಸಲು ಭೀಮಾ ಯೋಜನೆಯ ಸಾಕಷ್ಟು ಅವ್ಯವಹಾರ ನಡೆಯುತ್ತಿದ್ದು ಅಂತಹವರ ವಿರುದ್ಧ ಕಠಿಣ ಕ್ರಮ ಕೈಕೊಳ್ಳಬೇಕು.

ತಾಲೂಕಿನ ಎಲ್ಲಾ ರೈತರ ಜಮೀನುಗಳಿಗೆ ಹೋಗುವ ದಾರಿಯಲ್ಲಿ ಬೆಳೆದ ಕಂಠಿಗಳನ್ನು ಕಡಿಸಿ ದಾರಿ ಸುಗಮ ಮಾಡಿಸಬೇಕು.

ವಯೋವೃದ್ಧರಿಗೆ ಪಿಂಚಣಿ ಹಣ ಜಮಾ ಆಗದೇ ಸಾಕಷ್ಟು ಹಣ ಜಮಾ ಆಗದೇ ಸಮಸ್ಯೆ ಉಂಟಾಗಿದೆ ಅದನ್ನು ಸರಿಪಡಿಸಬೇಕು.



ಜೂನ ತಿಂಗಳಿನಲ್ಲಿ ಎಲ್ಲಾ ರೈತರಿಗೆ ಬೀತನೆಗೆ ಬೇಕಾಗುವ ಬೀಜ ಗೊಬ್ಬರ ಕೀಟನಾಶಕಗಳು ಹಾಗೂ ಯಂತ್ರೋಪಕರಣಗಳನ್ನು ಸರಿಯಾಗಿ ಹಾಗೂ ಗುಣಮಟ್ಟದ ವಸ್ತುಗಳನ್ನು ಕೊಡಬೇಕು ಎಂದು ಆಗ್ರಹಿಸಲಾಯಿತು.

ಈ ವೇಳೆ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಜಿಲ್ಲಾ ಉಪಾಧ್ಯಕ್ಷರಾದ ಸಂಪತ್ತ ಜಮಾದಾರ ತಾಲೂಕಾ ಅಧ್ಯಕ್ಷರಾದ ಈರಪ್ಪ ಕುಳೆಕುಮಟಗಿ ತಾ, ಗೌರವಾಧ್ಯಕ್ಷರಾದ ಶಿವಾನಂದಯ್ಯ ಹಿರೇಮಠ ಮುಖಂಡರಾದ ಸಿ.ಎಸ್.ಪ್ಯಾಠಿ ಮಲ್ಲನಗೌಡ ಬಿರಾದಾರ ರುದ್ರಯ್ಯ ಹಿರೇಮಠ ಅಪ್ಪಸಾಹೇಬ ಹರವಾಳ ಬಾಬು ಬಾಗವಾನ ಶಂಕರಗೌಡ ಹೊಸಗೌಡರ ಶಿವರಾಯ ಪ್ಯಾಠಿ ರಾಮು ದೇಸಾಯಿ ಸುನಂದಾ ಸೊನ್ನಳ್ಳಿ ಶಕೀರಾ ಹೆಬ್ಬಾಳ ಸಾಯಬ್ಬಿ ತಾಂಬೋಳಿ ಜಾಯಿದಾ ಕೊರಬೊ ಸೇರಿದಂತೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ. ಮನಗೂಳಿ. ತಾಳಿಕೋಟೆ**

# ಸಮಯ ಒಂದು ಅಮೂಲ್ಯವಾದ ಸಂಪನ್ಮೂಲ




ಸಮಯವು ನಿರಂತರವಾಗಿ ಬದಲಾಗುತ್ತಿರುತ್ತದೆ ಮತ್ತು ಬದಲಾವಣೆಯು ಪ್ರಕೃತಿಯ ನಿಯಮವಾಗಿದೆ. ಸಮಯ ಮತ್ತು ಬದಲಾವಣೆಯಿಂದ ಯಾವುದೂ ಸ್ವತಂತ್ರವಾಗಿಲ್ಲ. ಜೀವನವು ಚಿಕ್ಕದಾಗಿದೆ. ಮತ್ತು ಸಾಧಿಸಲು ಕಾರ್ಯಗಳು ವಿಶಾಲವಾಗಿವೆ ಮತ್ತು ಸವಾಲಿನವುಗಳಾಗಿವೆ. ಈ ಸತ್ಯವನ್ನು ನಾವು ಅರಿತುಕೊಳ್ಳಬೇಕು ಮತ್ತು ಯಾವುದೇ ನಿಮಿಷವನ್ನು ವ್ಯರ್ಥ ಮಾಡಬಾರದು. ಪ್ರತಿ ಸೆಕೆಂಡ್ ಮತ್ತು ಪ್ರತಿ ಅವಕಾಶವನ್ನು ಸಮರ್ಥವಾಗಿ ಮತ್ತು ಅರ್ಥಪೂರ್ಣವಾಗಿ ಬಳಸಬೇಕು ಇಂದಿನ ಬಿಡುವಿಲ್ಲದ ಜಗತ್ತಿನಲ್ಲಿ ಸಮಯ ನಿರ್ವಹಣೆ ಅತ್ಯಂತ ನಿರ್ಣಾಯಕ ಕಾರ್ಯವಾಗಿದೆ. ಸಮಯವು ಅಮೂಲ್ಯವಾದ ಸರಕು ಎಂದು ಜನರಿಗೆ ತಿಳಿದಿಲ್ಲ, ಅದು ಒಮ್ಮೆ ವ್ಯರ್ಥವಾದರೆ ಎಂದಿಗೂ ಮರುಪಡೆಯಲು ಸಾಧ್ಯವಿಲ್ಲ. ಸಮಯವು ನಮ್ಮ ಜೀವನದಲ್ಲಿ ಬಹಳ ಮುಖ್ಯವಾದ ವಸ್ತುವಾಗಿದೆ.

ಸಮಯ ಪಾಲನೆ ಎಂದರೆ ಈ ಸುಂದರ ಪ್ರಪಂಚದೊಂದಿಗೆ ಸಾಮರಸ್ಯದಿಂದ ಬದುಕುವುದು. ಸಮಯ ಪಾಲನೆಯನ್ನು ನಮ್ಮ ಸುತ್ತಲಿನ ಪ್ರಕೃತಿಯಿಂದ ಅಭ್ಯಾಸ ಮಾಡಲಾಗುತ್ತದೆ. ಸೂರ್ಯನು ಸಮಯಕ್ಕೆ ಸರಿಯಾಗಿ ಸೂರ್ಯೋದಯ ಮತ್ತು ಸೂರ್ಯಾಸ್ತವಾಗುವುದನ್ನು ನಾವು ನೋಡುತ್ತೇವೆ. ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ ಮತ್ತು ಸಮಯಕ್ಕೆ ಸರಿಯಾಗಿ ತನ್ನ ಕೆಲಸವನ್ನು ಮಾಡುತ್ತದೆ ಹಕ್ಕಿಗಳು ಬೇಗ ಏಳುತ್ತವೆ ಮತ್ತು ಚಿಲಿಪಿಲಿ ಶಬ್ದ ಮಾಡಲು ಪ್ರಾರಂಭಿಸುತ್ತವೆ. ಹೀಗಾಗಿ ನಾವೆಲ್ಲರೂ ಸಮಯ ಪಾಲನೆಯನ್ನು ಅಭ್ಯಾಸ ಮಾಡುತ್ತೇವೆ ಏಕೆಂದರೆ ಅದು ಒಬ್ಬ ವ್ಯಕ್ತಿಗೆ ಮಾತ್ರವಲ್ಲದೆ ಇಡೀ ಸಮುದಾಯ ಮತ್ತು ರಾಷ್ಟ್ರದ ಯಶಸ್ಸಿನ ಕೀಲಿಯಾಗಿದೆ.

ನನ್ನ ಪಾಲಿಗೆ ಸಮಯ "ಬಂಗಾರದ ನಾಣ್ಯ " ಖರ್ಚು ಮಾಡುವಾಗ ಹೇಗೆ ಮಾಡಬೇಕೆಂಬ ಆಯ್ಕೆ ನನ್ನದೇ. ಸಾರ್ಥಕವಾಗಿ ಬದುಕಬೇಕೆಂಬ ನಿರಂತರ ಪ್ರಯತ್ನದಲ್ಲಿ ಸಮಯದ ಬಂಗಾರದ ನಾಣ್ಯ ನಿರಂತರವಾಗಿ ಕರಗುತ್ತಿರುತ್ತದೆ. ತಡೆಯಲು ಸಾಧ್ಯವಿಲ್ಲ, ಆದರೆ ಕೈ ಜಾರಲು ಬಿಡೆನು. ಉಳಿದಿದ್ದೆಲ್ಲ ಆ ಭಗವಂತನ ಕೈಯೊಳಗಿದೆ.

ಪ್ರತಿಯೊಂದು ಗೆಲುವಿನ ಸಾಧನೆಗೆ ಸಮಯವೇ ಮುಖ್ಯ, ಸಮಯದ ಪಾಲನೆ ನಮಗಿರಬೇಕು. ಈ ಜಗತ್ತಿನಲ್ಲಿ ಖರ್ಚು ಮಾಡಬಾರದೆಂದರೂ ಖರ್ಚಾಗುವ ವಸ್ತುವೆಂದರೆ ಸಮಯ. ಸಮಯ ಎಲ್ಲರನ್ನು ಓಡಿಸುತ್ತದೆ ಆದರೆ ಸಮಯ ತಾನೆಂದು ವೇಗವಾಗಿ ಓಡುವುದಿಲ್ಲ. ಸಮಯ ಎಲ್ಲರನ್ನು ನಿಲ್ಲಿಸುತ್ತದೆ ಆದರೆ ಸಮಯ ತಾನೆಂದು ನಿಲ್ಲುವುದಿಲ್ಲ. ಕಳೆದು ಹೋದ ಒಳ್ಳೆಯ ಸಮಯ ಜೀವನದಲ್ಲಿ ನೆನಪಾಗಿ ಉಳಿಯುತ್ತದೆ ಕಳೆದು ಹೋದ ಕೆಟ್ಟ ಸಮಯ ಬದುಕಿನಲ್ಲಿ ಪಾಠವಾಗುತ್ತದೆ. ಸಮಯದ ಪ್ರಾಮುಖ್ಯತೆ ಹೇಳುವುದಾದರೆ, ಸಮಯವು ಯಾರಿಗೂ ಕಾಯುವುದಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು. ಇದು ಬಹಳ ಹಿಂದಿನಿಂದಲೂ ಇರುವ ನಂಬಿಕೆ, ಇದು ಇನ್ನೂ ನಿಜವಾಗಿದೆ. ಯಾರೂ ಗಡಿಯಾರವನ್ನು ನಿಲ್ಲಿಸಲು ಅಥವಾ ನಿಧಾನಗೊಳಿಸಲು ಸಾಧ್ಯವಿಲ್ಲ. ಅತ್ಯಂತ ಗಮನಾರ್ಹವಾದದ್ದು, ಒಬ್ಬರು ಇಷ್ಟಪಟ್ಟರೂ ಇಲ್ಲದಿದ್ದರೂ ಸಮಯ ಮುಂದುವರಿಯುತ್ತದೆ. ಏಕೆಂದರೆ ಸಮಯವು ಎಲ್ಲರಿಗೂ ಕಾಯುವುದಿಲ್ಲ, ಅದು ಅಮೂಲ್ಯ ವಸ್ತುವಾಗುತ್ತದೆ. ಆದ್ದ–ರಿಂದ, ಪ್ರತಿಯೊಬ್ಬರೂ ಸಮಯವನ್ನು ಸದುಪಯೋಗಪಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು. ಜನರು ಖಂಡಿತವಾಗಿಯೂ ಸಮಯ ವ್ಯರ್ಥ ಮಾಡುವುದನ್ನು ಮತ್ತು ಕಾಲಹರಣ ಮಾಡುವುದನ್ನು ನಿಲ್ಲಿಸಬೇಕು. ಏಕೆಂದರೆ ಸಮಯವು ಅಪರಿಮಿತವಾಗಿಲ್ಲ. ಸಮಯವು ಹಣಕ್ಕಿಂತ ಹೆಚ್ಚು ಏಕೆಂದರೆ ಖರ್ಚು ಮಾಡಿದ ಹಣವನ್ನು ಮತ್ತೆ ಗಳಿಸಬಹುದು ಆದರೆ ಒಮ್ಮೆ ಕಳೆದ ಸಮಯವನ್ನು ಎಂದಿಗೂ ಗಳಿಸಲಾಗುವುದಿಲ್ಲ. " ಸಮಯ ಮತ್ತು ಉಬ್ಬರವಿಳಿತವು ಯಾವುದಕ್ಕೂ ಕಾಯುವುದಿಲ್ಲ " ಎಂಬ ಸಾಮಾನ್ಯ ಮಾತು ಇದೆ. ಇದು ಭೂಮಿಯ ಮೇಲಿನ ಜೀವಿಗಳ ಅಸ್ತಿತ್ವದಷ್ಟೇ ಸತ್ಯ. ಸಮಯವು ನಿಲ್ಲದೆ ನಿರಂತರವಾಗಿ ಸಾಗುತ್ತದೆ. ಅದು ಯಾರಿಗೂ ಕಾಯುವುದಿಲ್ಲ.

ನಮಗೆಲ್ಲರಿಗೂ ಸಮಯ ಬಹಳ ಅಮೂಲ್ಯವಾದುದು. ನಾವು ಪ್ರತಿ ಕ್ಷಣವೂ ಸಮಯದ ಮಹತ್ವವನ್ನು ಗೌರವಿಸಬೇಕು. ನಮ್ಮ ಜೀವನದ ಕೊನೆಯ ಕ್ಷಣದವರೆಗೂ ನಾವು ಸಮಯವನ್ನು ವ್ಯರ್ಥ ಮಾಡಬಾರದು. ಈ ಪ್ರಪಂಚದಲ್ಲಿರುವ ಎಲ್ಲಕ್ಕಿಂತ ಸಮಯವು ತುಂಬಾ ಪ್ರಬಲವಾಗಿದೆ ಮತ್ತು ಶಕ್ತಿಯುತವಾಗಿದೆ. ಸಮಯಕ್ಕೆ ಬಹಳಷ್ಟು ಮಹತ್ವ ಕೊಟ್ಟರೆ ಜೀವನದಲ್ಲಿ ಏನಾದರೂ ಸಾಧಿಸಬಹುದು. ಸಮಯಕ್ಕೆ ಮೌಲ್ಯವಿದೆ. ಏಕೆಂದರೆ ಅದು ಯಾರಿಗೂ ಕಾಯುವುದಿಲ್ಲ ಕಾಲಕ್ಕೆ ಸರಿಯಾಗಿ ಕೆಲಸ ಮಾಡದೇ ಹೋದರೆ ಸೋಲುವುದು ನಾವೇ, ಕಾಲವಲ್ಲ! ಪ್ರಪಂಚದ ಅತಿ ದೊಡ್ಡ ಗುರು ಎಂದರೆ ಅದು ಸಮಯ ಅದು ಎಲ್ಲವನ್ನು ಕಲಿಸುತ್ತದೆ. ಸಮಯದ ಮಹತ್ವ ಅರಿತವನು ಜೀವನದಲ್ಲಿ ಮಹಾನ್ ಸಾಧನೆ ಮಾಡುವನು.



ಕಳೆದು ಹೋದ ಸಮಯ ಮತ್ತೆ ಬಾರದು. ಶಿಸ್ತು ಮತ್ತು ಸಮಯದ ಮಹತ್ವವನ್ನು ಯಾರು ಸರಿಯಾಗಿ ತಿಳಿದಿರುತ್ತಾರೆಯೋ ಅವರು ಜೀವನದಲ್ಲಿ ಸಾಧನೆ ಮಾಡಿ ಶ್ರೇಷ್ಠ ವ್ಯಕ್ತಿಯಾಗುತ್ತಾರೆ. ಕೇವಲ ಸಮಯವನ್ನು ಯಾರು ಬೇಜವಾಬ್ದಾರಿಯಿಂದ ಕಾಲಹರಣ ಮಾಡಿ ಅಶಿಸ್ತಿನಿಂದ ಇರುತ್ತಾರೋ ಅವರು ಜೀವದುದ್ದಕ್ಕೂ ಗೋಗೆರೆಯುತ್ತಾ ಇರುತ್ತಾ–ರೆ. ಒಬ್ಬ ವ್ಯಕ್ತಿ ಜೀವನದಲ್ಲಿ ಯಶಸ್ಸು ಕಂಡುಕೊಂಡಿದ್ದಾನೆ ಎಂದರೆ ಅದರ ಅರ್ಥ ಆ ವ್ಯಕ್ತಿ ಶಿಸ್ತುಬದ್ಧ ಜೀವನದ ಜತೆಯಲ್ಲಿ ಸಮಯದ ಮಹತ್ವ, ಸಮಯದ ಸದ್ಬಳಕೆ ಹಾಗೂ ಸಮಯ ಉಪಯೋಗಿಸಿಕೊಳ್ಳುವ ಚಾಣಾಕ್ಷತೆ ಹೊಂದಿರುತ್ತಾನೆ. ಎಲ್ಲರಿಗೂ ಸಮಯ ಒಂದೇ ರೀತಿಯದ್ದಾಗಿರುತ್ತದೆ. ಈ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಚಿಂತಕನಿಗೂ ಸಿಗುವಂತಹ ಸಮಯ 24 ಘಂಟೆಗಳು ಹಾಗೂ ಅತ್ಯಂತ ಕಟ್ಟ ಕಡೆಯ ಪ್ರಜೆಗೂ ಸಿಗುವಂತಹ ಸಮಯ 24 ಘಂಟೆಗಳು, ಆದಾಗ್ಯೂ ಯಾವ್ಯಾವ ವ್ಯಕ್ತಿ ಹೇಗೆಲ್ಲ ಸಮಯ ಬಳಸಿಕೊಳ್ಳುತ್ತಾನೆ ಎಂಬುದರ ಮೇಲೆ ಅವನ ಯಶಸ್ಸು, ಸಾಧನೆ, ಗುರಿ ನಿರ್ಧಾರವಾಗುತ್ತದೆ.

ಮಾನವನ ಪ್ರಗತಿಗೆ ಸಮಯವು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಸಮಯ ನಮಗೆ ಗೋಚರಿಸುವುದಿಲ್ಲ. ಆದರೆ ನಮಗೆ ತುಂಬಾ ವಿಷಯಗಳನ್ನು ಕಲಿಸಿ ಹೋಗುತ್ತದೆ. ಸಮಯವನ್ನು ಕಡೆಗಣಿಸಿ ಸಮಯ ಹಾಳು ಮಾಡಿದವನನ್ನು, ಒಂದು ದಿನ ಸಮಯವೂ ಕಡೆಗಣಿಸುತ್ತದೆ. ಸಮಯ ಯಾರ ಮನೆ ಆಳಲ್ಲ ಸಮಯದ ಮುಂದೆ ಯಾರು ಕೀಳಲ್ಲ ಹಿಂಬಾಲಿಸಿದರೆ ಸಾಧಕನಾಗುವೆ ಕಡೆಗಣಿಸಿದರೆ ಸೊಂಬೇರಿಯಾಗುವೆ.



ಸಮಯ ನಿರ್ವಹಣೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಬಹಳ ಮುಖ್ಯ. ನಾವು ಕಳೆಯುವ ಪ್ರತಿಯೊಂದು ಕ್ಷಣ ಕೂಡ ಬಹಳ ಮಹತ್ವವನ್ನು ಹೊಂದಿರುತ್ತದೆ. ಏಕೆ–ಂದರೆ ಒಮ್ಮೆ ಕಳೆದ ಸಮಯವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಎಷ್ಟರ ಮಟ್ಟಿಗೆ ತನ್ನ ಜೀವನದಲ್ಲಿ ಯಶಸ್ಸನ್ನು ಕಾಣುತ್ತಾನೆ ಎಂಬುದನ್ನು ಅವನ ಸಮಯ ನಿರ್ವಹಣೆ ಕೌಶಲ್ಯದ ಆಧಾರದ ಮೇಲೆ ಅಳೆಯಬಹುದು. ಸಣ್ಣದೊಂದು ಅಂಗಡಿಯನ್ನು ನಡೆಸುವವರಿಂದ ಹಿಡಿದು ದೊಡ್ಡ ಬಹುಕೋಟಿ ಕಂಪನಿಯನ್ನು ನಡೆಸುವ ವ್ಯಕ್ತಿಗಳ ಹತ್ತಿರ ಕೂಡ ಇರುವುದು, ದಿನದಲ್ಲಿ ಅದೇ 24 ಘಂಟೆಗಳು ಆದರೂ ಏಕೆ ಕೇವಲ ಬೆರಳಣಿಕೆಯಷ್ಟು ಜನ ಮಾತ್ರ ಯಶಸ್ಸನ್ನು ಕಾಣುತ್ತಾರೆ ಎಂದು ನಮ್ಮನ್ನು ನಾವು ಪ್ರಶ್ನಿಸಿದರೆ, ಅದಕ್ಕೆ ಉತ್ತರ ಬಹುಪಾಲು ಸಂದರ್ಭಗಳಲ್ಲಿ ಸಮಯದ ನಿರ್ವಹಣೆಯೇ ಆಗಿರುತ್ತದೆ. ಯಶಸ್ವಿ ವ್ಯಕ್ತಿಗಳ ಚರಿತ್ರೆಯನ್ನು ಒಮ್ಮೆ ಗಮನಿಸಿದರೆ ನಮಗೆ ಕಾಣುವ ಮುಖ್ಯವಾದ ಸಂಗತಿ ಅವರ ಸಾಧನೆಯಲ್ಲಿ ಸಮಯದ ಸಮರ್ಥವಾದ ಬಳಕೆಯ ಪಾತ್ರ. ಸಮಯದ ಸದ್ಬಳಕೆ ಜೀವನದ ಯಶಸ್ಸಿಗೆ ದಾರಿದೀಪವಾಗುತ್ತದೆ.

ಸಮಯವು ದೇವರ ಶ್ರೇಷ್ಠ ಕೊಡುಗೆ ಎಂದು ನಾವು ಹೇಳಬಹುದು. ಸಮಯ ಎಂಬುದು ನಿಂತ ನೀರಲ್ಲ. ಸಮಯಕೋಸ್ಕರ ನಾವೂ ಕಾಯಬೇಕೆ ಹೊರತು ಸಮಯ ನಮಗಾಗಿ ಕಾಯುವುದಿಲ್ಲ. ಮಾತು ಆಡಿದರೆ ಹೋಯಿತು ಮುತ್ತು ಒಡೆದ–ರೆ ಹೋಯಿತು ಎಂಬ ನಾಣ್ಣುಡಿಯಂತೆ ಒಂದು ಬಾರಿ ಹೋದ ಸಮಯ ಮತ್ತೆಂದಿಗೂ ನಮ್ಮ ಜೀವನದಲ್ಲಿ ಬಾರದು. ಸಮಯ ಹೋದರೆ ಅದನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ನಾವು ಜೀವನದಲ್ಲಿ ಯಾರಿಂದಲೂ ಕಲಿಯಲಾರದ್ದನ್ನು ಸಮಯ ಸಂದರ್ಭ ಕಲಿಸುತ್ತದೆ. ಸಮಯ ನಿಲ್ಲದ ಹೊತ್ತುವಿನಂತೆ. ಅದನ್ನು ನಾವೇ ಅನುಸರಿಸಿಕೊಂಡು ಹೋದಾಗ ಮಾತ್ರ ಸಮಯ ನಮ್ಮ ಸ್ವತ್ತಾಗುತ್ತದೆ. ಆಗ ಯಶಸ್ಸು ನಮ್ಮದಾಗುತ್ತದೆ. ಸಮಯವು ಒಂದು ಅಮೂಲ್ಯವಾದ ಸಂಪನ್ಮೂಲ. ಭೂಮಿಯ ಮೇಲಿನ ಅತ್ಯಂತ ಅಮೂಲ್ಯ ವಸ್ತು ಸಮಯ.

**– ಕು. ಜ್ಯೋತಿ ಆನಂದ ಚಂದುಕರ**
**ಬಾಗಲಕೋಟ**

## ಸಿ.ಬಿ.ಎಸ್.ಸಿ.ಪರೀಕ್ಷೆಯಲ್ಲಿ ವಿದ್ಯಾರ್ಥಿನಿ ಶಾಂತಲಾ ಜಿಲ್ಲೆಗೆ ಪ್ರಥಮ ನಗರದ ರಾಯಲ್ ಪ್ಯಾಲೇಸಗೆ ನೂರರಷ್ಟು ಫಲಿತಾಂಶ



**ಜಮಖಂಡಿ :** ನಗರದ ರಾಯಲ್ ಪ್ಯಾಲೇಸ್ ಶಾಲೆಯು ಕೇಂದ್ರ ಪಠ್ಯಕ್ರಮದ 10ನೇವರ್ಗದ ಪರೀಕ್ಷೆಯಲ್ಲಿ ಶೇಕಡಾ ನೂರರಷ್ಟು ಫಲಿತಾಂಶ ಪಡೆಯುವ ಮೂಲಕ ಸತತವಾಗಿ 14ನೇ ವರ್ಷವೂ ಕೂಡ ಮುಂದುವರಿಸಿದೆ.

ವಿದ್ಯಾರ್ಥಿಗಳಾದ ಶಾಂತಲಾ ಸಿಂಧೂರ ಶೇ.98.4 ಅಂಕದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಸೃಜನ ಕೊಕ್ಕನವರ, ರಾಹುಲ ಗುದ್ಲಿ, ಪ್ರೀತಮ ಸರಕಾರ, ಪ್ರತೀಕ ತರಡಿ, ಆರುಷಿ ಸಾವಳಗಿ, ಫಾತಿಮಾ ಶೇಖ, ಸಪ್ನಿಕಾ ಕೊಕಟನೂರ, ಬಿ.ಅನಿರುದ್ದ, ವಾಸವಿ ತುಳಸಿಗೇರಿ, ಅಂಕಿತಾ ಘಾಟಗೆ, ಶ್ರೇಯಾ ಲಿಗಾಡೆ, ವೈಷ್ಣವಿ ಕೋಳಿ, ಸೃಷ್ಟಿ ಪಾಟೀಲ, ಅನೂಪ ಬಾಡಗಿ, ರಮಣ ವರ್ಮಾ, ಮೊಹಮ್ಮದ ರೀಹಾನ ನದಾಫ ಉನ್ನತ ಸಾಧನೆ ಮಾಡಿದ್ದಾರೆ. ವಿಜ್ಞಾನ ಮತ್ತು ಸಮಾಜವಿಜ್ಞಾನ ವಿಷಯದಲ್ಲಿ ತಲಾ ಒಬ್ಬ ವಿದ್ಯಾರ್ಥಿ ನೂರಕ್ಕೆ ನೂರು ಅಂಕ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ.

ಪರೀಕ್ಷೆಗೆ ಹಾಜರಾಗಿದ್ದ 98 ವಿದ್ಯಾರ್ಥಿಗಳಲ್ಲಿ 20 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉನ್ನತ ಸಾಧನೆ ಮಾಡಿದ್ದಾರೆ. 13 ವಿದ್ಯಾರ್ಥಿಗಳು ಶೇ.80ಕ್ಕಿಂತ ಹೆಚ್ಚು ಅಂಕ, 25 ವಿದ್ಯಾರ್ಥಿಗಳು ಶೇ.70ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಮತ್ತು 22 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸತತ 14 ವರ್ಷಗಳಿಂದ ನೂರಕ್ಕೆ ನೂರಷ್ಟು ಫಲಿತಾಂಶ ಮುಂದುವರೆಸಿಕೊಂಡು ಬಂದಿರುವ ನಗರದ ರಾಯಲ್ ಪ್ಯಾಲೇಸ್ ಸ್ಕೂಲ್ ವಿಜಯಪೂರ-ಬಾಗಲಕೋಟ ಅವಳಿ ಜಿಲ್ಲೆಗಳಲ್ಲಿ ಕೇಂದ್ರ ಪಠ್ಯಕ್ರಮದ ಅತ್ಯುನ್ನತ ಸಾಧನೆ ಮಾಡುತ್ತಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಚೇರ್‌ಮನ್ ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ, ಆಡಳಿತ ವ್ಯವಸ್ಥಾಪಕ ಬಸವರಾಜ ನ್ಯಾಮಗೌಡ, ಪ್ರಾಚಾರ್ಯೆ ರೀತಾ ಜೈನರ ಸಹಿತ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದ್ದಾರೆ.

# “ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ”ಗೆ ಹಿರಿಯ ಸಾಹಿತಿಗಳಿಗೆ ಕರೆ

ಪುಸ್ತಕ ಪ್ರೀತಿ ಬೆಳೆಸುವ ದೃಷ್ಟಿಯಿಂದ, ಓದುಗರ ಮುಂದೆ, ಓದಲೇಬೇಕಾದ ಕೃತಿಗಳನ್ನು ಒದಗಿಸಿದರೆ, ಸೊಗಸಾದ ಮೃಷ್ಟಾನ್ನ ಭೋಜನ ಒದಗಿಸಿದಂತೆ. ಈ ಜಾಡಿನಲ್ಲಿ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ (ರಿ) ಕಳೆದ 32 ವರ್ಷಗಳಿಂದ, ಶ್ರೇಷ್ಠ ಕೃತಿಗಳ ಆಯ್ಕೆಗಾಗಿ, ಸಾಹಿತ್ಯ ಸ್ವರ್ಧೆ ಹಮ್ಮಿಕೊಂಡು ಬರುತ್ತಿದೆ. ಈಗಾಗಲೇ 31 ವರ್ಷದಲ್ಲಿ, 350ಕ್ಕೂ ಹೆಚ್ಚು ಕೃತಿಗಳನ್ನು ಆಯ್ಕೆ ಮಾಡಿ, ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ನೀಡಿ ಲೇಖಕರನ್ನು ಗೌರವಿಸಿ, ಪ್ರೋತ್ಸಾಹಿಸಿದೆ.

ಸಮಾರಂಭವು ಸಪ್ಟೆಂಬರ್ 15-2024 ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆಯಂದು ಬೆಂಗಳೂರಿನಲ್ಲಿ ಈ ಗೌರವ ಪ್ರಶಸ್ತಿಯನ್ನು ನೀಡಲಾಗುವುದು.

50 ವರ್ಷ ಮೇಲ್ಪಟ್ಟ, ಕನಿಷ್ಟ 10 ವಿವಿಧ ಪ್ರಕಾರಗಳ ಕೃತಿಗಳನ್ನು ರಚನೆ ಮಾಡಿರುವ ಹಿರಿಯ ಲೇಖಕರು, ಈ ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿಗೆ ಅರ್ಹರಿರುತ್ತಾರೆ. ಹಿರಿಯನ್ನು ಗೌರವಿಸಬೇಕೆಂದು, ಅವರ ಕೃತಿಗಳ



ಆಯ್ಕೆ ಮಾಡಿ ಓದುಗರ ಮುಂದೆ ಪ್ರಸ್ತುತ ಪಡಿಸುವುದೇ ಈ ಸಮಾರಂಭದ ವಿಶೇಷ. ಆಸಕ್ತಿ ಇರುವ ಲೇಖಕರು, ತಮ್ಮ ಇತ್ತೀಚಿನ ಸಂಪೂರ್ಣ ಬಯೋಡಾಟಾ ಮತ್ತು 2 ಫೋಟೋದೊಂದಿಗೆ, ತಮ್ಮ ರಚನೆಯ 10 ಅಥವಾ ಹೆಚ್ಚು ಕೃತಿಗಳನ್ನು, ಕೂಡಲೇ ಕಳುಹಿಸಲು ಕೋರಲಾಗಿದೆ. ಈ ಪ್ರಶಸ್ತಿಯು ಜಿಲ್ಲಾವಾರು ಆಯ್ಕೆಯಾಗಿರುವುದರಿಂದ, ಕೂಡಲೇ ಕಾರ್ಯೋನ್ಮುಖರಾಗಬೇಕೆಂದು ಕೋರಲಾಗಿದೆ.

ಸಂಸ್ಥೆ ವಿಶ್ವೇಶ್ವರಯ್ಯ ಆಕರ ಗ್ರಂಥಾಲಯ ಸ್ಥಾಪಿಸಿದ್ದು, ಸದರಿ ಗ್ರಂಥಾಲಯಕ್ಕೆ ನಿಮ್ಮ 10 ಕೃತಿಗಳ ಹೊರತಾಗಿ, ಹೆಚ್ಚಿನ ಬೇರೆ ಬೇರೆ ಪುಸ್ತಕಗಳನ್ನು ದಾನ ಮಾಡಬಹುದು. ಒಟ್ಟಾರೆ ಪುಸ್ತಕಗಳನ್ನು ಕಳುಹಿಸುವವರು ವಿ.ಆರ್.ಎಲ್. (ಗಾಂಧಿನಗರ) ಅಥವಾ ಎಸ್.ಆರ್.ಎಸ್. (ಆನಂದ್‌ರಾವ್ ಸರ್ಕಲ್) ರೀತಿಯ ಬಸ್ ಪಾರ್ಸೆಲ್ ಮೂಲಕ - ರಮೇಶ ಸುರ್ವೆ, ಪತ್ರಕರ್ತರು, ಗಾಂಧಿನಗರ, ಬೆಂಗಳೂರು ವಿಳಾಸಕ್ಕೆ ಕಳುಹಿಸಬಹುದು ಅಥವಾ ನೇರವಾಗಿ ನಮ್ಮ ಕಛೇರಿಗೆ ತಲುಪಿಸಬಹುದು.

ಇದು ಗೌರವ ಪ್ರಶಸ್ತಿಯಾಗಿದ್ದು, ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ, ಮುತ್ತಿನ ಹಾರ, ಶಾಲು ಮತ್ತು ಬ್ಯಾಡ್ಜ್ ಒಳಗೊಂಡಿರುತ್ತದೆ. ಆಹ್ವಾನ ಪತ್ರಿಕೆ ಮತ್ತು ಸ್ಮರಣ ಸಂಚಿಕೆಯಲ್ಲಿ ಲೇಖಕರ ಫೋಟೋ ಸಮೇತ ವಿವರಗಳು ದಾಖಲಾಗುತ್ತದೆ. ಸಮಾರಂಭದ ಸಂಪೂರ್ಣ ವಿಡಿಯೋ ನಮ್ಮ "ಸುರ್ವೆ ನ್ಯೂಸ್" ಯು



ಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೌಡ್ ಸೌಲಭ್ಯವಿರುತ್ತದೆ.

**ಪುಸ್ತಕ ಕಳುಹಿಸುವ ವಿಳಾಸ :**
**ರಮೇಶ ಸುರ್ವೆ ಅಧ್ಯಕ್ಷರು, ವಿಶ್ವೇಶ್ವರಯ್ಯ ಪ್ರತಿಷ್ಠಾನ (ರಿ.) ನಂ. 468/ಸುರ್ವೆ, 13ನೇ ಮುಖ್ಯರಸ್ತೆ, 3ನೇ ಹಂತ, ಮೋದಿ ಸರ್ಕಲ್-ತಿಮ್ಮಯ್ಯ ರಸ್ತೆ, ಮಂಜುನಾಥನಗರ, ಬೆಂಗಳೂರು-560010.**
**ಮೊ : 9845307327**

# ಕೆ. ಜೆ. ಸೊಮ್ಮೈಯಾ ಶಾಲೆ ಫಲಿತಾಂಶ ಶೇ. 100



**ಮಹಾಲಿಂಗಪುರ :** ಸಮೀಪದ ಸಮೀರವಾಡಿ ಕೆ.ಜೆ.ಸೊಮ್ಮೈಯಾ ಇಂಗ್ಲೀಷ್ ಮಾಧ್ಯಮ ಶಾಲೆಯ 10ನೇ ತರಗತಿಯ ಸಿಬಿಎಸ್‌ಇ ಫಲಿತಾಂಶ ಶೇ.100 ರಷ್ಟಾಗಿದೆ.

ಪರೀಕ್ಷೆಗೆ ಕುಳಿತ 55 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ಶೇ 90 ಕ್ಕಿಂತ ಹೆಚ್ಚಿನ ಅಂಕ ಪಡೆದಿದ್ದಾರೆ. ಶಾಲೆಗೆ ಸಿಂಚನಾ ಎಸ್.ಬ್ಯಾಳಿ (ಶೇ 95.6) ಪ್ರಥಮ, ಖುಷಿ ಎಸ್.ಶಿರೋಳ (ಶೇ 94) ದ್ವಿತೀಯ ಹಾಗೂ ಅಂಕಿತಾ ಎಂ.ಪಾಟೀಲ (ಶೇ 92.2) ತೃತೀಯ ಸ್ಥಾನ ಪಡೆದಿದ್ದಾರೆ.

ವಿನಯ ಎಂ.ಮೇದಾರ (ಶೇ 91.6), ನವೀನ ಎಂ.ಮೇಟಿ (ಶೇ 91.6), ಶ್ರಾವಣಿ ಆರ್. ದೇಸಾಯಿ (ಶೇ 91), ದೀಪ್ತಿ ಎನ್. ಯಕ್ಕೇಳಿ (ಶೇ 90.2) 90% ಕ್ಕಿಂತ ಅಧಿಕ ಅಂಕಗಳನ್ನು ಪಡೆದರೆ, ಚಂದ್ರಿಕಾ ಕೂಡ್ಲಿ, ಸಂಜನಾ ಕಿತ್ತೂರ, ಅಂಕಿತಾ ಎಂ.ಪಾಟೀಲ ಸೇರಿ ಮೂವರು ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ ಎಂದು ಪ್ರಾಚಾರ್ಯ ಸಿ.ಅನೀಲಕುಮಾರ ತಿಳಿಸಿದ್ದಾರೆ.

# ಮಳೆಯಲ್ಲೇ ಮಾತೃ ವಂದನೆ ಕಾರ್ಯಕ್ರಮ

**ಮಹಾಲಿಂಗಪುರ :** ಸುರಿಯುತ್ತಿದ್ದ ಮಳೆಯಲ್ಲಿಯೇ ತಾಯಂದಿರ ಪಾದ ಪೂಜೆ ಮಾಡಿದ ಸ್ಥಳೀಯ ಕುಬಸದ ಗಲ್ಲಿ ಮಕ್ಕಳು ಅರ್ಥಪೂರ್ಣವಾಗಿ ವಿಶ್ವ ತಾಯಂದಿರ ದಿನ ಆಚರಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕುಬಸದ ಗಲ್ಲಿಯಲ್ಲಿ ವಿದ್ಯಾಶ್ರೀ ಮಹಿಳಾ ಸ್ವಸಹಾಯ ಸಂಘದ ವತಿಯಿಂದ ಆಯೋಜಿಸಿದ್ದ ಮಾತೃ ವಂದನಾ ಕಾರ್ಯಕ್ರಮದಲ್ಲಿ ಶುಕ್ರವಾರ ಸಂಜೆ 7 ಗಂಟೆಗೆ ತಮ್ಮ ತಮ್ಮ ತಾಯಂದಿರನ್ನು ಕುರ್ಚಿಯ ಮೇಲೆ ಕೂಡಿಸಿ ತಾಯಂದಿರ ಪಾದಗಳಿಗೆ ವಿಭೂತಿ, ಕುಂಕುಮ, ಊದುಬತ್ತಿ ಹಚ್ಚಿ ಹಣೆಮಣೆದು ಆಶೀರ್ವಾದ ಪಡೆಯಬೇಕೆನ್ನುವಷ್ಟರಲ್ಲಿ ವರುಣದೇವನೂ ಸಹ ಸಂತುಷ್ಟನಾಗಿ



ಜೋರಾಗಿ ಮಳೆ ಸುರಿದನು. ಮಳೆಯಿಂದ ಸಂಪೂರ್ಣ ನೆನೆಯಿತ್ತಿದ್ದರೂ ಮಕ್ಕಳು ಹಿಂಜರಿಯದೇ ಮತ್ತಷ್ಟು ಉತ್ಸುಕರಾಗಿ ಪಾದ ಪೂಜೆ ಮಾಡಿ ಕೃತಾರ್ಥರಾದರು. ಮುದ್ದು ಮಕ್ಕಳ ಮಾತೃ ಭಕ್ತಿ ಹಾಗೂ ವರುಣ ದೇವನ ಮಳೆಯ ಸಿಂಚನದಿಂದ ಮೂಕವಿಸ್ಮಿತರಾದ ತಾಯಂದಿರು ಹೃದಯ ತುಂಬಿ ಹಾರೈಸಿದರು.

ಶಿಕ್ಷಕ ಸಿದ್ಧಾರೂಢ ಮುಗಳಖೋಡ, ಪತ್ರಕರ್ತ ನಾರನಗೌಡ ಉತ್ತಂಗಿ ಮಾತನಾಡಿದರು. ಜೆಸಿ ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ, ಬಾಗಲಕೋಟೆ ಜಿಲ್ಲಾ ನೇಕಾರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸಂಗಪ್ಪ ಹಳ್ಳೂರ ವೇದಿಕೆ ಮೇಲಿದ್ದರು. ಕಲಾವಿದ ರಾಜು ಗಲಗಲಿ ಮಾತೃ ಭಕ್ತಿಯ ಗೀತೆಗಳನ್ನು ಹಾಡಿ ಗಮನ ಸೆಳೆದರು.

ಮಹಾದೇವ ಗಲಗಲಿ, ಪ್ರಕಾಶ ಬಿಲಕುಂದ, ಗಿರಿಮಲ್ಲ ಯರಗಡ್ಡಿ, ಸಿದ್ದಪ್ಪ ವನಹಳ್ಳಿ, ಮಹಾಲಿಂಗ ಹನಗಂಡಿ, ಶ್ರೀಕಾಂತ ಜಗದಾಳ, ಶಂಕರ ಪಂಕಿ, ಮಂಜು ಹಳ್ಳೂರ, ಚಂದ್ರು ಯರಗಟ್ಟಿ, ಮಲ್ಲು ಹುಣಶ್ಯಾಳ, ಅಡಿವೆಪ್ಪ ಹುಣಶ್ಯಾಳ, ಮಹಾಲಿಂಗ ನಡಕಟ್ಟಿ ಅವರ ನೇತೃತ್ವದಲ್ಲಿ ಆಯೋಜಿದ್ದ ಕಾರ್ಯಕ್ರಮದಲ್ಲಿ ನೂರಾರು ತಾಯಂದಿರು, ಮಕ್ಕಳು ಭಾಗವಹಿಸಿದ್ದರು.

# ರಸ್ತೆ ಮಧ್ಯ ಚರಂಡಿ ನಿರ್ಮಾಣ: ಪ್ರಭಾವಿಗಳಿಗೆ ಮಣೆ ಹಾಕಿದ ಆರೋಪ

**ರಬಕವಿ-ಬನಹಟ್ಟಿ :** ಸಾಮಾನ್ಯವಾಗಿ ಚರಂಡಿಗಳನ್ನು ರಸ್ತೆ ಬದಿಯಲ್ಲಿ ನಿರ್ಮಾಣ ಮಾಡುವದನ್ನು ನೋಡಿದ್ದೀರಿ. ಇಲ್ಲೊಬ್ಬ ಗುತ್ತಿಗೆದಾರ ರಸ್ತೆ ಮಧ್ಯೆಯೇ ಚರಂಡಿ ನಿರ್ಮಾಣ ಮಾಡುವ ಮೂಲಕ ಸಾರ್ವಜನಿಕರ ವಿರೋಧಕ್ಕೆ ಕಾರಣವಾಗಿದೆ.

ನಗರಸಭೆ ಯೋಜನೆಯಡಿ ವಾರ್ಡ್ ನಂ.29 ರಾಮಪೂರದ ಸ್ವಾಮಿ ವಿವೇಕಾನಂದ ನಗರದಲ್ಲಿ ಈ ರೀತಿ ಸಿಸಿ ರಸ್ತೆ ಮಧ್ಯ ಚರಂಡಿ ನಿರ್ಮಾಣವಾಗಿದೆ.

ನೂರಾರು ಮನೆಗಳಿರುವ ಈ ಪ್ರದೇಶದಲ್ಲಿ 400 ಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಬಡಾವಣೆಯಾಗಿದೆ. ಇಲ್ಲಿನ ನಿವಾಸಿಗಳು ಚರಂಡಿ ಬಗ್ಗೆ ನಗರಸಭೆಗೆ ದೂರು ಸಲ್ಲಿಸಿದರೂ ಯಾವದೇ ಪ್ರಯೋಜನವಾಗಿಲ್ಲ.

ಅವೈಜ್ಞಾನಿಕ ಕಾಮಗಾರಿ: ಕಳೆದೆರಡು ವರ್ಷಗಳಿಂದ ನಗರಸಭೆ ಅಧೀನದಿಂದ ರಸ್ತೆ ಹಾಗು ಚರಂಡಿ ಕಾಮಗಾರಿಗಳಲ್ಲಿ ಅವೈಜ್ಞಾನಿಕದಿಂದ ಕೂಡಿದ್ದು, ಸಾರ್ವಜನಿಕರ ಹಿತದೃಷ್ಟಿ ಬದಲಾಗಿ ಪ್ರಭಾವಿ ವ್ಯಕ್ತಿಗಳ ಓಲೈಕೆಯಂತೆ



ಕಾರ್ಯಗಳನ್ನು ರೂಪಿಸುತ್ತ ಪ್ರಮುಖ ರಸ್ತೆಗಳೆಲ್ಲವೂ ಚರಂಡಿ ಪ್ರವೇಶದಿಂದ ದಿನದಿಂದ ದಿನಕ್ಕೆ ಇಕ್ಕಟ್ಟಾಗುವಲ್ಲಿ ನಗರಸಭೆ ಕಾರಣವಾಗಿದೆ.

ಈ ಕುರಿತು ಸಾರ್ವಜನಿಕರು ಪ್ರತಿ ಬಾರಿ ಮನವರಿಕೆ ಮಾಡಿ ಒತ್ತಾಯಿಸಿದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿಗಳು ಬೇಕಾಬಿಟ್ಟಿಯಾಗಿ ನಡೆಯುತ್ತಿರುವದು ವಿಪರ್ಯಾಸ.

ಪ್ರಭಾವಿಗಳ ಕೈವಾಡ: ರಸ್ತೆ ಪಕ್ಕ ರಾಜಕೀಯ ಪ್ರಭಾವಿಗಳಿಗೆ ನಗರಸಭೆ ಅಧಿಕಾರಿಗಳು, ಗುತ್ತಿಗೆದಾರರು ಮಣಿದು ಈ ರೀತಿ ರಸ್ತೆ ಮಧ್ಯೆ ಚರಂಡಿ ಕಾಮಗಾರಿ ನಡೆಸುತ್ತಿರುವ ಹುನ್ನಾರ ನಡೆಯುತ್ತಿದೆ ಎಂದು ಸಾರ್ವಜನಿಕರು ಆಪಾದಿಸಿದ್ದಾರೆ. ಬಹುತೇಕ ಕಡೆಗಳಲ್ಲಿ ಮಾನವ

> **“ಹಲವು ಬಾರಿ ಮನವಿ ನೀಡಿದರೂ ಯಾವದೇ ಪ್ರಯೋಜನವಾಗಿಲ್ಲ. ಜನರ ವಿರೋಧದ ನಡೆವೆಯೂ ರಸ್ತೆ ಮಧ್ಯೆ ಚರಂಡಿ ನಿರ್ಮಿಸಿದ್ದಾರೆ. ಇದನ್ನು ವಿರೋಧಿಸುತ್ತೇವೆ.’**
> ◆ **ದೊಂಡಿರಾಮ ದಾನವಾಡಕರ**
> **ನಾಗರಿಕ, ರಾಂಪೂರ.**

ಸಂಪನ್ಮೂಲ ಬಳಕೆಯಿಂದ ಚರಂಡಿ ನಿರ್ಮಾಣ ಮಾಡುವ ಪ್ರದೇಶದಲ್ಲಿ ಜೆಸಿಬಿ ಯಂತ್ರಗಳ ಬಳಕೆಯಿಂದ ಕಿರಿದಾದ ರಸ್ತೆಗಳು ಮತ್ತಷ್ಟು ಕಿರಿದಾಗಿ ವಾಹನ ಸಂಚಾರಕ್ಕೆ ತೀವ್ರ ಅಡ್ಡಿಯಾಗುವಲ್ಲಿ ಕಾರಣವಾಗಿದೆ.

ಎಲ್ಲ 31 ವಾರ್ಡ್‌ಗಳಲ್ಲಿಯೂ ಈ ಸಮಸ್ಯೆ ಸಾಮಾನ್ಯವಾಗಿದ್ದು, ನಗರಸಭೆ ಎಲ್ಲ ಪ್ರದೇಶಗಳಲ್ಲಿನ ಚರಂಡಿಗಳ ಬಗ್ಗೆ ಮಾಹಿತಿ ಪಡೆದು ಸುಗಮ ಸಂಚಾರಕ್ಕೆ ರಸ್ತೆಗೆ ಆದ್ಯತೆ ನೀಡುವ ಮೂಲಕ ವೈಜ್ಞಾನಿಕವಾಗಿ ಚರಂಡಿ ನಿರ್ಮಾಣ ಮಾಡಬೇಕೆಂದು ನಾಗರಿಕರ ಒತ್ತಾಯವಾಗಿದೆ.

# ಮಲ್ಲಮ್ಮನ ಆದರ್ಶಗಳು ಸ್ತ್ರೀ ಕುಲಕ್ಕೆ ಬಹುದೊಡ್ಡ ಕಾಣಿಕೆ



**ರಬಕವಿ-ಬನಹಟ್ಟಿ :** ಮಹಾ ಶಿವಶರಣೆಯಾಗಿ ಬದುಕಿದ ಹೇಮರೆಡ್ಡಿ ಮಲ್ಲಮ್ಮನವರ ಆದರ್ಶಗಳು ಸ್ತ್ರೀ ಕುಲಕ್ಕೆ ಬಹುದೊಡ್ಡ ಕಾಣಿಕೆ. ಅವಳ ತತ್ವ ಆದರ್ಶಗಳು ನಮಗೆಲ್ಲರಿಗೂ ಮಾದರಿ ಎಂದು ರಬಕವಿ-ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಅವರು ಇತ್ತೀಚೆಗೆ ರಬಕವಿ-ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಹೇಮರಡ್ಡಿ ಮಲ್ಲಮ್ಮನ ಜಯಂತ್ಯೋತ್ಸವದ ಸಂದರ್ಭದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಮಲ್ಲಮ್ಮ ತಮ್ಮ ಜೀವನಪೂರ್ತಿ ಅನೇಕ ಕಷ್ಟ ನೋವುಗಳನ್ನು ಬೇರೆಯವರಿಂದ ಕಂಡರೂ ಅವರಿಗೆ ಹಿತವನ್ನು ಬಯಸಿದ ಮಹಾನ್ ಮಹಿಳೆಯಾಗಿದ್ದರು. ಮಲ್ಲಿಕಾರ್ಜುನ ದೇವರಿಂದ ವಿಶೇಷ ವರ ಪಡೆದ ಮಲ್ಲಮ್ಮ ಸಂಪತ್ತಿನ ಬಗ್ಗೆ ಅಹಂ ಬೇಡ.

ದಾನ ಗುಣವನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬುದು ಅವರ ಮಹತ್ವದ ಸಂದೇಶವಾಗಿತ್ತು ಎಂದು ಸ್ವಾದಿ ತಿಳಿಸಿದರು.

ಈ ಸಂದರ್ಭದಲ್ಲಿ ಉಪತಹಶೀಲ್ದಾರ ಎಸ್. ಎಲ್. ಕಾಗಿಯವರ, ಕಂದಾಯ ನಿರೀಕ್ಷಕರಾದ ಪಿ. ಆರ್. ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ಸಮಾಜದ ಮುಖಂಡರಾದ ವೆಂಕಟೇಶ ನಿಂಗಸಾನಿ, ಸಿದ್ದಪ್ಪ ವೆಂಕಪ್ಪ ಮೇಣಿ, ಭೀಮಶಿ ಮಗದುಮ್, ಮಹಾದೇವ ಕೋಟ್ಯಾಳ, ಚೇತನ ಭಜಂತ್ರಿ, ಪ್ರಕಾಶ ವಂದಾಲ ಸೇರಿದಂತೆ ಅನೇಕರು ಮುಖಂಡರು ಉಪಸ್ಥಿತರಿದ್ದರು.

# ತಾಯಿಗಿಂತ ಕರುಳ ಬಳ್ಳಿ ಇನ್ನೊಂದಿಲ್ಲ

**ರಬಕವಿ-ಬನಹಟ್ಟಿ :** ಭೂಮಿಯ ಮೇಲೆ ತಾಯಿಗಿಂತ ದೇವರಿಲ್ಲ. ಪ್ರತಿಯೊಬ್ಬರ ಜೀವನದಲ್ಲಿ ತಾಯಿಗೆ ವಿಶೇಷವಾದ ಸ್ಥಾನ ಇದೆ. 'ತಾಯಿಗಿಂತ ಬಂಧು ಇಲ್ಲ ಉಪ್ಪಿಗಿಂತ ರುಚಿ ಇಲ್ಲ' ಎಂಬಂತೆ ತಾಯಿ ಕರುಳ ಬಳ್ಳಿ ಇನ್ನೊಂದಿಲ್ಲ ಎಂದು ಹಳಿಂಗಳಿಯ ಭದ್ರಗಿರಿ ಬೆಟ್ಟದ ಜೈನ ಮುನಿ ಕುಲರತ್ನಭೂಷಣ ಆಚಾರ್ಯ ಶ್ರೀ ಹೇಳಿದರು.

ಸೋಮವಾರ ವಿಶ್ವ ತಾಯಂದಿರ ದಿನದ ಅಂಗವಾಗಿ ಹಮ್ಮಿಕೊಂಡ ಆಧ್ಯಾತ್ಮಿಕ ಪ್ರವಚನದಲ್ಲಿ ಅವರು ಆಶೀರ್ವಚನ ನೀಡಿದರು. ಯಾವುದೇ ವ್ಯಕ್ತಿ ಎಷ್ಟೇ ದೊಡ್ಡ ಸ್ಥಾನಕ್ಕೇರಿದರೂ, ಇಡೀ ಜಗತ್ತೇ ಮೆಚ್ಚುವಂಥ ಸಾಧನೆ ಮಾಡಿದ್ದರೂ, ಅದಕ್ಕೆಲ್ಲಾ ಮೊದಲ ಕಾರಣ ತಾಯಿಯೇ ಆಗಿರುತ್ತಾಳೆ. ಆಕೆಯ ಪ್ರೀತಿ, ತ್ಯಾಗಕ್ಕೆ ಬೆಲೆ ಕಟ್ಟಲಾಗದು. ನಿತ್ಯವೂ ತಾಯಿಯ ದಿನವೇ ಆಗಿರುತ್ತದೆ. ಆದರೆ ವಿಶೇಷವಾದ ದಿನ ನಿಮಗಾಗಿ ಬರುತ್ತಿದೆ. ತಾಯಂದಿರ ದಿನವನ್ನು ಸಂಭ್ರಮಿಸಿದ್ದು ನಮಗೆ ಸಂತಸ ತಂದಿದೆ ಎಂದರು.

ತಾಯಂದಿರ ದಿನದ ಇತಿಹಾಸವು ಪ್ರಾಚೀನ ಕಾಲದಷ್ಟು ಹಿಂದಿನದು. ಆದರೆ ರಜಾ ದಿನದ ಆಧುನಿಕ



ಆಚರಣೆಯು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಪ್ರಾರಂಭವಾಗಿ, ಪ್ರಾಚೀನ ಬೇರುಗಳ ಪ್ರಕಾರ, ಪ್ರಾಚೀನ ಗ್ರೀಕರು ಮತ್ತು ರೋಮನ್ನರು ರಿಯಾ ಮತ್ತು ಸೈಬೆಲ್ ನಂತಹ ಮಾತೃ ದೇವತೆಗಳನ್ನು ಗೌರವಿಸುವ ಹಬ್ಬಗಳನ್ನು ಆಚರಿಸುತ್ತಿದ್ದರು. ಈ ಆಚರಣೆಗಳನ್ನು ವಸಂತಕಾಲದಲ್ಲಿ ನಡೆಸಲು ಪ್ರಾರಂಭಿಸಿದರು.

ಸಫರ್ಜೆಟ್ ಜೂಲಿಯಾ ವಾರ್ಡ್ ಹೋವೆ ತಾಯಂದಿರ ದಿನಕ್ಕೆ ಪ್ರಯತ್ನಗಳನ್ನು ನಡೆಸಿದ್ದರು ಎಂದು ಇತಿಹಾಸಗಳ ಮುಖಾಂತರ ನಾವು ಕೇಳುತ್ತೇವೆ. 1870 ರಲ್ಲಿ ವಾರ್ಡ್ ಹೋವೆ ಅವರು "ತಾಯಂದಿರ ದಿನ ಘೋಷಣೆ" ಯನ್ನು ದೃಢಪಡಿಸಿದರು. ಶಾಂತಿ ಮತ್ತು ನಿಶ್ಯಸ್ತ್ರೀಕರಣಕ್ಕಾಗಿ ಮಹಿಳೆಯರು ಒಗ್ಗೂಡಬೇಕೆಂದು ಕರೆ ನೀಡಿದ್ದರು. ಆಧುನಿಕ ತಾಯಂದಿರ ದಿನವನ್ನು ಅಮೇರಿಕದ ಸಾಮಾಜಿಕ ಕಾರ್ಯಕರ್ತೆ ಅನ್ನಾ ಜಾರ್ವಿಸ್ ಮುನ್ನಡೆಸಿದರು. 1905 ರಲ್ಲಿ ತನ್ನ ಸ್ವಂತ ತಾಯಿಯ ಮರಣದ ನಂತರ, ಜಾರ್ವಿಸ್ ತಾಯಂದಿರನ್ನು ಗೌರವಿಸಲು ರಾಷ್ಟ್ರೀಯ ರಜಾ ದಿನವನ್ನು ಸ್ಥಾಪಿಸಲು ಪ್ರಚಾರ ಮಾಡಿದರು ಎಂದರು.

1914 ರಲ್ಲಿ ಅಧ್ಯಕ್ಷ ವುಡ್ರೊ ವಿಲ್ಸನ್ ಮೇ ತಿಂಗಳ ಎರಡನೇ ಭಾನುವಾರವನ್ನು ಅಮೇರಿಕದಲ್ಲಿ ತಾಯಂದಿರ ದಿನವೆಂದು ಗೊತ್ತುಪಡಿಸುವ ಘೋಷಣೆಗೆ ಸಹಿ ಹಾಕಿದರು. ಈ ಅಧಿಕೃತ ಮಾನ್ಯತೆಯು ದೇಶ ವಿದೇಶಗಳಲ್ಲಿ ತಾಯಂದಿರ ದಿನವನ್ನು ವ್ಯಾಪಕವಾಗಿ ಆಚರಿಸಲು ಕಾರಣವಾಯಿತು. ಅಂದಿನಿಂದ, ತಾಯಂದಿರ ದಿನವನ್ನು ಪ್ರಪಂಚದಾದ್ಯಂತದ ವಿವಿಧ ದೇಶಗಳು ಅಳವಡಿಸಿಕೊಂಡಿವೆ. ಆದರೆ ಅನ್ನಾ ಜಾರ್ವಿಸ್ ಅವರನ್ನು ಹೆಚ್ಚಾಗಿ ತಾಯಂದಿರ ದಿನದ ಸ್ಥಾಪಕ ಎಂದು ಕರೆಯಲಾಗುತ್ತದೆ. ನಂತರ ಅವರು ಅದರ ವಾಣಿಜ್ಯೀಕರಣದಿಂದಾಗಿ ರಜಾ ದಿನದ ಕಟು ಟೀಕಾಕಾರರಾದರು ಎಂದು ಹೇಳಲಾಗುತ್ತದೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಅನೇಕ ಶ್ರಾವಕ ಶ್ರಾವಕಿಯರು ಭಾಗವಹಿಸಿದ್ದರು.

# ಕೂಡಗಿ ಎನ್.ಟಿ.ಪಿ.ಸಿ. ಚಿಮಣಿ ಮೇಲಿಂದ ಬಿದ್ದು ಯುಪಿ ಮೂಲದ ಕಾರ್ಮಿಕ ಸಾವು

**ವರದಿ:ಲಾಲಸಾಬ ಸವಾರಗೋಳ**



**ವಿಜಯಪುರ :** ಜಿಲ್ಲೆಯ ಕೂಡಗಿ ಬಳಿ ಇರುವ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ (NTPC) ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ಕಾರ್ಮಿಕ ಚಿಮಣಿ ಮೇಲಿಂದ ಬಿದ್ದು ಮೃತಪಟ್ಟಿರುವ ದುರಂತ ಘಟನೆ ಜರುಗಿದೆ. ಮೃತ ಕಾರ್ಮಿಕನನ್ನು ಉತ್ತರ ಪ್ರದೇಶದ ಗಾಜಿಪುರ ಮೂಲದ ಕಿಶನಕುಮಾರ ಭಾರದ್ವಾಜ್ (32) ಎಂದು ಗುರುತಿಸಲಾಗಿದೆ. ಇಂಡಿಯನ್ ಬ್ಯಾಗ್ ಪ್ರೈವೇಟ್ ಲಿಮಿಟೆಡ್ ಮೂಲಕ ಕಿಶನಕುಮಾರ ಕೊಲ್ಹಾರ ತಾಲೂಕಿನ ಕೂಡಗಿ ಎನ್.ಟಿ.ಪಿ.ಸಿ. ಘಟಕದಲ್ಲಿ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದ.

ಮಂಗಳವಾರ ಸಂಜೆ ಕೆಲಸದಲ್ಲಿ ತೊಡಗಿದ್ದಾಗ 130 ಅಡಿ ಎತ್ತರದ ಚಿಮಣಿಗೆ ಕೇಬಲ್ ಅಳವಡಿಸುವ ಕಾರ್ಯದಲ್ಲಿ ನಿರತವಾಗಿದ್ದಾಗ ಆಯತಪ್ಪಿ ಕೆಳಗೆ ಬಿದ್ದು, ಮೃತಪಟ್ಟಿದ್ದಾನೆ.

ಕಿಶನಕುಮಾರ ದುರಂತ ಘಟನೆ ಬಳಿಕ ಆಕ್ರೋಶಗೊಂಡ ಕಾರ್ಮಿಕರು, ಅಪಾಯಕಾರಿ ಕೆಲಸದಲ್ಲಿ ತೊಡಗುವ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಇಲ್ಲ. ರಕ್ಷಣಾತ್ಮಕ ಪರಿಕರಗಳು ಇಲ್ಲದೇ ಕೆಲಸ ಮಾಡುವ ಕಾರ್ಮಿಕರು ಈ ರೀತಿ ದುರಂತ ಸಾವಿಗೆ ಈಡಾಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಕಾರ್ಮಿಕರು ಘಟಕದ ಎದುರು ಪ್ರತಿಭಟನೆ ನಡೆಸಿದರು.

ಮೃತ ಕಿಶನಕುಮಾರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು, ಘಟಕದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ ಸುಧಾರಿತ ರಕ್ಷಣಾತ್ಮಕ ಪರಿಕರಗಳನ್ನು ಒದಗಿಸಬೇಕು. ಮೃತ ಕಾರ್ಮಿಕನ ಕುಟುಂಬಕ್ಕೆ ತುರ್ತಾಗಿ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಎನ್.ಟಿ.ಪಿ.ಸಿ. ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಾಕಿ ಉಳಿದ ರೈತರಿಗೆ ಹಂತ-ಹಂತವಾಗಿ ಪರಿಹಾರ ಪಾವತಿಸುವ ಕಾರ್ಯವು ಪ್ರಗತಿಯಲ್ಲಿದೆ: ಜಿಲ್ಲಾಧಿಕಾರಿ ದಿವ್ಯ ಪ್ರಭು

**ಧಾರವಾಡ :** ಧಾರವಾಡ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಹಂತಗಳಲ್ಲಿ ಒಟ್ಟು 1,06,707 ರೈತರಿಗೆ 108.12 ಕೋಟಿ ರೂ.ಗಳ ಇನಪುಟ್ ಸಬ್ಸಿಡಿ ಬಿಡುಗಡೆಯಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2023 ನೇ ಸಾಲಿನ ಮುಂಗಾರು ಹಂಗಾಮಿನ ಬರ ಪರಿಸ್ಥಿತಿಯಿಂದಉಂಟಾದಬೆಳೆಹಾನಿಗೆಎಸ್‌ಡಿಆರ್‌ಎಫ್ ಅಥವಾ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಅರ್ಹತೆಯ ಅನುಗುಣವಾಗಿ ಈಗಾಗಲೇ ಅರ್ಹ ರೈತರಿಗೆ ಗರಿಷ್ಟ 2 ಸಾವಿರ ರೂ.ಗಳವರೆಗೆ ಪಾವತಿಸಿರುವ ಬೆಳೆಹಾನಿ ಪರಿಹಾರ ಮೊತ್ತವನ್ನು ಪರಿಗಣನೆಗೆ ತೆಗೆದು-ಕೊಂಡು, ಅರ್ಹತೆಯಂತೆ ಇನ್ನುಳಿದ ಬಾಕಿ ಬೆಳೆಹಾನಿ ಪರಿಹಾರ ಮೊತ್ತವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಿ, ಸರ್ಕಾರವು ಆದೇಶಿಸಿದೆ.

ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿಯ ಆಧಾರ ಮೇಲೆ (FRUITS ID) ಪ್ರೂಟ್ಸ್ ಐಡಿ ಹೊಂದಿರುವ ರೈತರಿಗೆ ಪರಿಹಾರ ತಂತ್ರಾಂಶದ ಮೂಲಕ ಹಂತ-ಹಂತವಾಗಿ ಪರಿಹಾರ ವಿತರಣೆ ಮಾಡಲಾಗುತ್ತಿದೆ. ಸರ್ಕಾರದಿಂದ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನವನ್ನು ಜಮ ಮಾಡಲಾಗಿದೆ. ಬಾಕಿ ಉಳಿದ ಅರ್ಹ ರೈತರಿಗೆ ಹಂತ ಹಂತವಾಗಿ ಪರಿಹಾರ ಪಾವತಿಸುವ ಕಾರ್ಯವು ಪ್ರಗತಿಯ ಹಂತದಲ್ಲಿದ್ದು ತುರ್ತಾಗಿ ಕ್ರಮಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ಅನುಮೊದನೆ ನೀಡಿರುವ ರೈತರ ಮಾಹಿತಿಯ ಪಟ್ಟಿಯನ್ನು ನಾಡ ಕಚೇರಿಗಳು, ಗ್ರಾಮ ಪಂಚಾಯತಿಗಳು, ರೈತ ಸಂಪರ್ಕ ಕೇಂದ್ರಗಳು ಹಾಗೂ ತಹಶೀಲ್ದಾರ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ. ಬೆಳೆ ಹಾನಿ ಪರಿಹಾರ ಪಡೆದುಕೊಳ್ಳಲು (FRUITS ID) ಪ್ರೂಟ್ಸ್ ಐಡಿ ಕಡ್ಡಾಯವಾಗಿರುವುದರಿಂದ ಇದುವರೆಗೂ ಪ್ರೂಟ್ಸ್ ಐಡಿ ಮಾಡಿಸಿಕೊಳ್ಳದೇ ಇರುವ ರೈತರು ನಿಗದಿತ ಅವಧಿಯಲ್ಲಿ ತಮ್ಮ ಆಧಾರ್, ಬ್ಯಾಂಕ್ ಖಾತೆಯ ವಿವರ ಹಾಗೂ ಪಹಣಿ ಮಾಹಿತಿಯನ್ನು ಗ್ರಾಮ ಆಡಳಿತ ಅಧಿಕಾರಿಗಳಿಗೆ ಅಥವಾ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ (FRUITS ID) ಪ್ರೂಟ್ಸ್ ಐಡಿ ಸೃಜಿಸಿಕೊಳ್ಳಬಹುದು. (FRUITS ID) ಪ್ರೂಟ್ಸ್ ಐಡಿ ಇಲ್ಲದ ರೈತರು ಬೆಳೆ ಪರಿಹಾರ ಪಡೆಯಲು ಸಾಧ್ಯಾವಾಗುವುದಿಲ್ಲವೆಂದು ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ರೈತರು ಈ ಕೆಳಕಂಡ ಸಹಾಯವಾಣಿಗಳಿಗೆ ಸಂಪರ್ಕಿಸಬಹುದು.

ಧಾರವಾಡ ಜಿಲ್ಲಾಧಿಕಾರಿಗಳ ಕಾರ್ಯಾಲಯ 0836-2233840, 1077, ಉಪವಿಭಾಗಾಧಿಕಾರಿಗಳ ಕಾರ್ಯಾಲಯ ಧಾರವಾಡ -0836-2233860, ಕೃಷಿ ಇಲಾಖೆಯ ಜಂಟಿ ನಿರ್ದೇಶಕರ ಕಾರ್ಯಾಲಯ -0836-2447517, ತೊಟಗಾರಿಕೆ ಇಲಾಖೆಯ ಉಪನಿರ್ದೇಶಕರಕಾರ್ಯಾಲಯ-0836-2746334, ಧಾರವಾಡ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯ -0836-2233822, ಹುಬ್ಬಳ್ಳಿ ತಾಲೂಕು ತಹಶೀಲ್ದಾರ ಕಾರ್ಯಾಲಯ -0836-2233844, ಹುಬ್ಬಳ್ಳಿ ನಗರ ತಹಶೀಲ್ದಾರ ಕಾರ್ಯಾಲಯ -0836-2358035, ಕುಂದಗೋಳ ತಾಲೂಕು ತಹಶೀಲ್ದಾರ ಕಾರ್ಯಾಲಯ -08304-290239, ಕಲಘಟಗಿ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯ -08970-284535, ನವಲಗುಂದ ತಾಲೂಕು ತಹಶೀಲ್ದಾರ ಕಾರ್ಯಾಲಯ - 0830-229240, ಅಣ್ಣಿಗೇರಿ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯ - 9008249921 ಹಾಗೂ ಅಳ್ನಾವರ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯ -0836-2385544 ಗೆ ಸಂಪರ್ಕಿಸಿ ಬೆಳೆ ಪರಿಹಾರ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗೀತ ಸಂಜೆ, ವಚನ ಗಾಯನ




**ಧಾರವಾಡ :** ಸಂಗೀತ, ಸಾಹಿತ್ಯ ಬೆಳವಣಿಗೆಯಲ್ಲಿ ಮತ್ತು ನಾಡು-ನುಡಿ ಸಂರಕ್ಷಣೆಯಲ್ಲಿಕರ್ನಾಟಕ ವಿದ್ಯಾವರ್ಧಕ ಸಂಘದ ಪಾತ್ರತುಂಬಾದೊಡ್ಡದುಎಂದುಡಾ.ಎಚ್ ವಿ ಬೆಳಗಲಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದಯುವಜನ ಮಂಟಪಹುಬ್ಬಳ್ಳಿಯಶಿರೂರಪಾರ್ಕ್‌ಬಡಾವಣೆಯ 2 ಹಾಗೂ 3ನೇ ಹಂತಗಾರ್ಡನ್‌ನಲ್ಲಿರುವ ವೇದಿಕೆಯಲ್ಲಿ ಏರ್ಪಡಿಸಿದ್ದ ಸಂಗೀತ ಸಂಜೆ ಹಾಗೂ ವಚನ ಗಾಯನಕಾರ್ಯಕ್ರಮ ಉದ್ಘಾಟಿಸಿ, ಮುಖ್ಯಅತಿಥಿಯಾಗಿ ಮಾತನಾಡುತ್ತಿದ್ದರು.

ಮುಂದುವರೆದುಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕ್ರಮಗಳು ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಕಾರ್ಯಕ್ರಮಆಯೋಜಿಸುತ್ತಾ ನಾಡು ನುಡಿಗೆದಕ್ಕೆ ಬಂದಾಗದ್ವನಿ ಎತ್ತಿ ಹೋರಾಡಿದ ಹಿರಿಯ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘವಾಗಿದೆ.134 ವರ್ಷ ಪೂರೈಸಿದ ಸಂಘವು ಇಂದಿಗೂ ತನ್ನಘನತೆಯನ್ನು ಉಳಿಸಿಕೊಂಡು ಕನ್ನಡಕ್ಕೆಧಕ್ಕೆ ಬಂದಾಗಲೆಲ್ಲಾಗುಡುಗುತ್ತಿದೆಎಂದರು.

ಉಪನ್ಯಾಸಕರಾಗಿ ಆಗಮಿಸಿದ ಜಾನಪದ ವಿದ್ವಾಂಸರಾದಡಾ.ರಾಮೂ ಮೂಲಗಿ ಅವರುತಮ್ಮ ಲಾವಣಿಹಾಡುಗಳಮೂಲಕಜಗಜ್ಯೋತಿಬಸವೇಶ್ವರ ಹಾಗೂ ಛತ್ರಪತಿ ಶಿವಾಜಿ ಅವರಇತಿಹಾಸವನ್ನು ಹೇಳಿದರು.ನಾಡಿನದಾರ್ಶನಿಕರ ಆದರ್ಶಗಳಿಂದು ಯುವಕರಿಗೆ ಮುಟ್ಟಿಸಬೇಕಾಗಿದೆ.ಅಂತಹ ಕೆಲಸವನ್ನುಕರ್ನಾಟಕ ವಿದ್ಯಾವರ್ಧಕ ಸಂಘವು ನಿರಂತರವಾಗಿಯುವಕರಿಗೆ ಹಲವಾರುಕಾಯರ್ಕ್ರಮಆಯೋಜಿಸುತ್ತ ಪ್ರೋ?ರತ್ಸಾಹ ಮಾಡುತ್ತ ಬಂದಿದೆಎಂದರು. ಸಮಾರಂಭದಅಧ್ಯಕ್ಷತೆಯನು ್ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಗೌರವ ಕಾರ್ಯದರ್ಶಿಗಳಾದ ರವೀಂದ್ರ ಬಳಿಗಾರ ಅವರು ವಹಿಸಿದ್ದರು.

ಸಮಾರಂಭದಲ್ಲಿ ಶಿರೂರ ಪಾರ್ಕಿನ ನಿವಾಸಿಗಳಾದ ಡಾ. ಪ್ರತೀಕಅನಂತ ಪದ್ಮನಾಭ ಐತಾಳ ಅವರು ಎಂ.ಬಿ.ಬಿ.ಎಸ್ ನಲ್ಲಿ ಬಂಗಾರದ ಪದಕ ಪಡೆದದಕ್ಕಾಗಿ ಹಾಗೂ ಕುಮಾರಿ. ಧಾನೇಶ್ವರಿ ನಾಗರಾಜಕೋರಿಅವರುಎಂ.ಟೆಕ್ ನಲ್ಲಿ ಬಂಗಾರದ ಪಡೆದದ್ದಕ್ಕಾಗಿ ಮತ್ತು ನಂದಿನಿ ಶೈಲೇಶ ಹೊನ್ನಳ್ಳಿ ಪಿಯುಸಿ ವಿಜ್ಞಾನ ವಿಷಯದಲ್ಲಿ ಶೇಕಡಾ 92.2% ಅಂಕ ಪಡೆದದ್ದಕ್ಕಾಗಿ ಗೌರವಿಸಿ ಸನ್ಮಾನಿಸಲಾಯಿತು. ಹುಬ್ಬಳ್ಳಿಯ ಖ್ಯಾತ ಸಂಗೀತಗಾರರಾದ ಶ್ರೀಮತಿ ಶೋಭಾಜಾಬಿನ್ ವಚನ ಗಾಯನ ನಡೆಸಿಕೊಟ್ಟರು. ಸಮಾರಂಭದಲ್ಲಿ ಎಂ.ವಿ. ಕರಮರಿ, ಎಸ್. ಎಸ್. ಹಂಗರಕಿ ಉಪಸ್ಥಿತರಿದ್ದರು.ಯುವಜನ ಮಂಟಪದ ಸಂಚಾಲಕರಾದಡಾ.ಮಹೇಶ ಧ. ಹೊರಕೇರಿ ನಿರೂಪಿಸಿದರು. ಸದಸ್ಯರಾದ ಜಿ. ವಿ. ಹಿರೇಮಠ, ಮೃತ್ಯುಂಜಯ ಕಮಡೊಳ್ಳಿಶೆಟ್ಟರ ಹಾಗೂ ಶಿರೂರ ಪಾರ್ಕಿನ ನಿವಾಸಿಗಳು ಉಪಸ್ಥಿತರಿದ್ದರು.

# ಡಿಮ್ಹಾನ್ಸ್ ಸಂಸ್ಥೆಯಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಣೆ

**ಧಾರವಾಡ :** ಶ್ರೀ ಜಗಜ್ಯೋತಿ ಬಸವಣ್ಣನವರು 12ನೇ ಶತಮಾನದಲ್ಲಿ ಎಲ್ಲರಿಗೂ ಸಮಾನತೆ ಇರಬೇಕೆಂಬ ಒಳ್ಳೆಯ ಆಲೋಚನೆಯನ್ನು ಇಟ್ಟು-ಕೊಂಡು ಜಾತಿ ಪದ್ಧತಿ ನಿರ್ಮೂಲನೆ ಮಾಡಲು, ಕೆಳವರ್ಗದ ಜನರಿಗೆ ಸಮಾನತೆ, ಮಹಿಳಾ ಸಮಾನತೆ ಮತ್ತು ಆರ್ಥಿಕ ಸಮಾನತೆಗೆ ಹೋರಾಟ ನಡೆಸಿದ್ದರು ಎಂದು ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕರಾದ ಡಾ. ಅರುಣಕುಮಾರ.ಸಿ ಅವರು ಹೇಳಿದರು.



ಮೇ 10, 2024 ರಂದು ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್) ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಶ್ರೀ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಮಾತನಾಡಿದರು.

ಬಸವಣ್ಣನವರ ಸಮ ಸಮಾಜ ಕನಸು ನಿಜವಾಗಬೇಕಾದರೆ ನಾವು ಅವರ ತತ್ವಗಳನ್ನು ಅಳವಡಿಸಿಕೊಂಡು ಅವರನ್ನು ಗೌರವಿಸಬೇಕು. ಶ್ರೀ ಜಗಜ್ಯೋತಿ ಬಸವಣ್ಣನವರು ಜನಪರ ಹಾಗೂ ಸಮಾಜ ಸುಧಾರಣೆ ಕಾರ್ಯಗಳನ್ನು ಕೈಗೊಂಡಿದ್ದರು. ಕಾಯಕವೇ ಕೈಲಾಸವೆಂದು ಸಾರಿ ಜನರನ್ನು ದುಡಿದು ಬದುಕುವ ಪಥದಲ್ಲಿ ಮುನ್ನಡಿಸಿದರು. ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು. ಬಸವಣ್ಣನವರನ್ನು ಶ್ರೀ ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಬಂಢಾರಿ ಬಸವಣ್ಣ, ಮಹಾಮಾನಾವತಾವಾದಿ ಬಸವಣ್ಣನೆಂದು, ಪ್ರಸ್ತುತ ವಿಶ್ವಗುರು ಬಸವಣ್ಣನೆಂದು ಕೂಡ ಕರೆಯುತ್ತಾರೆ. ಬಸವಣ್ಣನವರು ತಮ್ಮ ವಚನದ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕವೆಂದು ಸಾರುವ ಮೂಲಕ, ತಮ್ಮ ಮಾನವೀಯತೆ ತತ್ವ-ಕ್ಕೆ ಸಾಹಿತ್ಯದ ಸ್ಪರ್ಶ ನೀಡಿದ್ದಾರೆ ಎಂದು ಅವರು ಹೇಳಿದರು.

ಕನ್ನಡ ಸಾಹಿತ್ಯಕ್ಕೆ ಬಸವಣ್ಣನವರ ವಚನಗಳ ಕೊಡುಗೆ ಅಗಾಧವಾದದ್ದು, ಇವರ ಅಂ-ದಾಜು 5 ಸಾವಿರ ವಚನಗಳಿಗಿಂತ ಹೆಚ್ಚು ವಚನಗಳು ಸಂಗ್ರಹಿಸಿಡಲಾಗಿದ್ದು, ಇವರ ವಚನಗಳು ಯಾವಾಗಲೂ ಅರ್ಥಗರ್ಭಿತ ಮತ್ತು ಸಮಾಜ ಸುಧಾರಣೆ ತರುವ ಶಕ್ತಿ ಹೊಂದಿದೆ. ಕೂಡಲ ಸಂಗಮದೇವ ಇವರ ವಚನಗಳ ಅಂಕಿತನಾಮವಾಗಿದ್ದು, ಇವರ ವಚನಗಳು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆಯೆಂದು ತಿಳಿಸಿದರು. ಅನುಭವ ಮಂಟಪದಲ್ಲಿ ಬಸವೇಶ್ವರರ ಚಿಂತನೆಗಳಿಗೆ ಹಲವು ಶರಣರಿಂದ ಮೆಚ್ಚುಗೆ ವ್ಯಕ್ತಪಡಿಸಿಲಾಗಿದೆ. ಇವರ ಪ್ರತಿಮೆಯನ್ನು ಲಂಡನಿನ ಥೇಮ್ಸ್ ನದಿಯ ತೀರದಲ್ಲಿ ಈಗಾಗಲೇ ಅನಾವರಣ ಮಾಡಲಾಗಿದ್ದು, ಇದು ಎಲ್ಲರಿಗೂ ಖುಷಿಯನ್ನು ನೀಡುವ ವಿಚಾರವಾಗಿದೆಯೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಹಿರಂಗ ಶುದ್ದಿಗಿಂತ ಅಂತರಂಗ ಶುದ್ದಿಗೆ ಆದ್ಯತೆಯನ್ನು ನೀಡಿ, ದಯೆ, ಪ್ರೀತಿ ಮತ್ತು ಅನುಕಂಪದೊಂದಿಗೆ ಆಚಾರವೇ ಸ್ವರ್ಗ ಅನಾಚಾರವೇ ನರಕ ವೆನ್ನುವ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಬಸವಣ್ಣನವರು ತಮ್ಮ ಜೀವನದೊಂದಿಗೆ ತೊರಿಸಿಕೊಟ್ಟರೆ ಎಂದು ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕರಾದ ಡಾ. ಅರುಣಕುಮಾರ.ಸಿ ಅವರು ತಿಳಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಹಿರಿಯ ವ್ಯವಸ್ಥಾಪಕ ಡಾ.ಮೋಹನಕುಮಾರ ಥಂಬದ ಅವರು ಮಾತನಾಡಿ, ಬಸವಣ್ಣನವರ ವಿಚಾರಗಳು ವಿಶ್ವದಾದ್ಯಂತ ಹೆಚ್ಚು ಮನ್ನಣೆಯನ್ನು ಪಡೆದುಕೊಂಡಿದೆ. ಇವರ ಹಲವಾರು ವಚನಗಳು ಸಮಾಜ ಸುಧಾರಣೆಗೆ ದಾರಿಯನ್ನು ತೋರುತ್ತದೆ. ಸರಳ ಜೀವನದೊಂದಿಗೆ ಉನ್ನತ ವಿಚಾರಗಳನ್ನು ಹೊಂದಿರುವವರು ಶ್ರೀ ಜಗಜ್ಯೋತಿ ಬಸವೇಶ್ವರರಾಗಿದ್ದು ಇವರ ವಿಚಾರಗಳನ್ನು ನಾವು ಜೀವನದಲ್ಲಿ ಅಳವಡಿಸಕೊಳ್ಳಬೇಕಾಗಿದೆ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಡಿಮ್ಹಾನ್ಸ್ ಸಂಸ್ಥೆಯ ಡಿಮ್ಹಾನ್ಸ್‌ನ ವೈದ್ಯಕೀಯ ಅಧೀಕ್ಷಕರಾದ ಡಾ. ರಾಘವೇಂದ್ರ ನಾಯಕ್, ಸಹಾಯಕ ಆಡಳಿತಾಧಿಕಾರಿ ವಿಜಯಲಕ್ಷ್ಮೀ ತೋರಗಲ್‌ಮಠ, ನರ್ಸಿಂಗ್ ಅಧಿಕ್ಷಕಿ ಗಾಯತ್ರಿ ಶಿಂಧೆ ಸೇರಿದಂತೆ ಡಿಮ್ಹಾನ್ಸ್ ಸಂಸ್ಥೆಯ ಇತರ ವಿಭಾಗದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಗೂ ನರ್ಸಿಂಗ್ ವಿಭಾಗದ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಹನುಮಂತ ಮುದೆವಗೋಳ್ ನಿರೂಪಿಸಿದರು. ಕಾವೇರಿ ಕಿತ್ತೂರು ಪ್ರಾರ್ಥಿಸಿದರು. ಅಶೋಕ ಕೋರಿ ಸ್ವಾಗತಿಸಿದರು. ಆರ್. ಎಮ್.ತಿಮ್ಮಾಪೂರ ವಂದಿಸಿದರು.

# ಶ್ರೀ ಬಲಭೀಮ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಉತ್ತಮ ಸಾಧನೆ

**ತಾಳಿಕೋಟೆ :** ತಾಲೂಕಿನ ಸಾಸನೂರ ಗ್ರಾಮದ ಶ್ರೀ ಬಲಭೀಮ ಜನತಾ ವಿದ್ಯಾವರ್ದಕ ಸಂಘದಡಿಯಲ್ಲಿ ನಡೆಯುತ್ತಿರುವ ಶ್ರೀ ಬಲಭೀಮ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರಿಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಕು.ಸುಧಾ ವಜ್ಜಲ 584(ಶೇ.93.44) ಪ್ರಥಮ, ಆರತಿ ರಾ ಹಿರೇಮಠ 582(ಶೇ.93.12) ದ್ವಿತೀಯ, ಸಿದ್ದಮ್ಮ ಸಂ ಟಕ್ಕಳಕಿ 574(ಶೇ.91.84) ತೃತೀಯ ಸ್ಥಾನವನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯ ಒಟ್ಟು ಫಲಿತಾಂಶವು ಶೇ. 91.16 ರಷ್ಟಾಗಿದ್ದು ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ



ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಮಾಜಿ ಶಾಸಕ ಶಿವಪುತ್ರಪ್ಪ ದೇಸಾಯಿ, ಮುಖ್ಯಗುರುಗಳು, ಹಾಗೂ ಸಿಬ್ಬಂದಿವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

# ಕಿಸಾನ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಚನ್ನಬಸಯ್ಯ ಹಿರೇಮಠ ನೇಮಕ

**ವಿಜಯಪುರ :** ಕಿಸಾನ ಕಾಂಗ್ರೆಸ್‌ನ ಜಿಲ್ಲಾ ಉಪಾಧ್ಯಕ್ಷರಾಗಿ ನಗರದ 21 ನೇ ವಾರ್ಡಿನ ಲಕ್ಷ್ಮೀ ನಗರದ ನಿವಾಸಿಯಾದ ಚನ್ನಬಸಯ್ಯ ಹಿರೇಮಠ ಅವರನ್ನುಜಿಲ್ಲಾಕಾಂಗ್ರೆಸ ವರಿಷ್ಠರಆದೇಶದ ಮೆರೆಗೆಜಿಲ್ಲಾ ಕಿಸಾನ ಕಾಂಗ್ರೆಸ್‌ನಅಧ್ಯಕ್ಷರಾದ ಬಾಪುಗೌಡ ಪಾಟೀಲ ಅವರು ಲೋಕಸಭಾ ಅಭ್ಯರ್ಥಿಯಾದ ಪ್ರೋರಾಜುಆಲಗೂರ ನೇತೃತ್ವದಲ್ಲಿಆಯ್ಕೆಮಾಡಿಜಿಲ್ಲಾಕಾಂಗ್ರೆಸ ್ಕಚೇರಿಯಲ್ಲಿ ಪಕ್ಷದ ಸಿದ್ದಾಂತಗಳನ್ನು ಹೇಳಿ ಆದೇಶ ಪ್ರತಿಯನ್ನು ನೀಡಿದರು




ಕಾಂಗ್ರೆಸ ಪಕ್ಷವೂಯಾವಾಗಲೂ ಹಿಂದೂಳಿದ, ಶೋಷಿತರ, ಬಡವರ, ಮಹಿಳೆಯರ, ಕಾರ್ಮಿಕರ, ರೈತರ ಪರವಾಗಿ ಹಾಗೂ ಸಮಾಜದಲ್ಲಿ ತುಳಿತ್ತಕ್ಕೆ ಒಳಗಾದವರನ್ನು ಮೇಲೆತ್ತುವ ಹಾಗೂ ಅಂತವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಬಂದಿರುತ್ತದೆ, ಆ ನಿಟ್ಟಿನಲ್ಲಿ ಕಿಸಾನ ಕಾಂಗ್ರೆಸ್‌ಕೂಡಾ ಸಮಾಜದಲ್ಲಿ ಯಾವುದೇ ರೈತರಿಗೆ ಅನ್ಯಾಯಗಳಾಗದಂತೆ ಹಲವಾರು ಯೋಜನೆಗಳನ್ನು ರೂಪಿಸಿದೆ, ಇದರಡಿ ನೀವೂ ಕೂಡಾಜಿಲ್ಲೆಯಾಧ್ಯಂತರೈತ ಸಂಘಟನೆ ಮಾಡಿ, ರೈತರಿಗೆ ಬೆನ್ನೆಲುಬಾಗಿ ನಿಲ್ಲಬೇಕುಎಂದು ಕಿಸಾನ ಕಾಂಗ್ರೆಸನಅಧ್ಯಕ್ಷರಾದ ಬಾಪುಗೌಡ ಪಾಟೀಲ ಅವರುಆದೇಶ ಪ್ರತಿ ಮಾತನಾಡಿದರು.

ಈ ಸಂದರ್ಭದಲ್ಲಿಕಾಂಗ್ರೆಸ್ ಮುಖಂಡರಾದ ಸಲೀಮ ಕಲಾದಗಿ, ಅಶೋಕ ಬಾಗೇವಾಡಿ, ಡಿ.ಎಸ್. ಎಸ್ ಸಂಚಾಲಕರಾದಚನ್ನುಕಟ್ಟಿಮನಿ, ಸಾಲೋಡಗಿಗ್ರಾ, ಪಂ ಸದಸ್ಯರಾದ ಮುತ್ತುಗೌಡ ಪಾಟೀಲ, ಅಲ್ಪ ಸಂಖ್ಯಾತರಜಿಲ್ಲಾ ಪ್ರಧಾನ ಕಾರ್ಯದರ್ಶಿಗಲಾದ ವಾಸೀಮ್ ಇನಾಮದಾರ, ರಾಮನಗೌಡ ಪಾಟೀಲ ಬ್ಯಾಲ್ಯಾಳ, ಪ್ರದೀಪ ಮೀಸ್ಕಿನ್, ಕಲ್ಲಪ್ಪ ಪಾರಶೆಟ್ಟಿ, ಶಂಕರ ಭಂಜತ್ರಿ, ಅರುಣದೊಡಮನಿ, ವಿಶಾಲ ವಡ್ಡೊಡಗಿ, ಆನಂದ ಭಜಂತ್ರಿ ಸೇರಿದಂತೆ ಇತರರು ಇದ್ದರು.

# ಶ್ರೀ ಸಂಗಮೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಉತ್ತಮ ಸಾಧನೆ



**ತಾಳಿಕೋಟೆ :** ಪಟ್ಟಣದ ಎಸ್.ಎಸ್.ವಿದ್ಯಾಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ. ಪರಿಕ್ಷೆಯಲ್ಲಿ ವಿಧ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಮನೋಜ ಬಡಿಗೇರ 543(ಶೇ.86.88) ಚಂದಮ್ಮ ಎಮ್ಮೆ 543.88(ಶೇ.86.88) ಪ್ರಥಮ, ಮೌನೇಶ ರಾಠೋಡ 535 (ಶೇ.85.66) ದ್ವಿತೀಯ, ಕಿಸನಸಿಂಗ್ ಹಜೇರಿ 532(ಶೇ.85.12) ತೃತೀಯ ಸ್ಥಾನವನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಯಲ್ಲಿ

ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಎಚ್.ಎಸ್.ಪಾಟೀಲ, ಕಾರ್ಯದರ್ಶಿ ಸಚೀನ ಪಾಟೀಲ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

# ಬೆಳೆಹಾನಿ ಪರಿಹಾರ: ಜಿಲ್ಲೆಯ 2.50ಲಕ್ಷ ರೈತರ ಖಾತೆಗೆ 36010.20 ಲಕ್ಷ ರೂ.ಜಮೆ

**ವಿಜಯಪುರ :** ಜಿಲ್ಲೆಯ ಎಲ್ಲ ತಾಲೂಕುಗಳನ್ನು ಈಗಾಗಲೇ ಸರ್ಕಾರ ಬರಪೀಡಿತ ತಾಲೂಕುಗಳೆಂದು ಘೋಷಿಸಿದ್ದು, ಬೆಳೆಹಾನಿಯಾದ ರೈತರ ಖಾತೆಗಳಿಗೆ ನೇರವಾಗಿ ಡಿಬಿಟಿ ಮೂಲಕ ಪರಿಹಾರ ಹಣ ಜಮೆ ಮಾಡಲಾಗುತ್ತಿದ್ದು, ಜಿಲ್ಲೆಯಲ್ಲಿ 36010.20 ಲಕ್ಷ ರೂ.ಗಳನ್ನು 2,50,063 ರೈತರಿಗೆ ಜಮೆ ಮಾಡಲಾಗಿದೆ. ರೈತರು ತಮ್ಮ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನ ಜಮೆಯಾಗಿರುವ ಕುರಿತು https://parihara.karnataka.gov.in/service92/ ಜಾಲತಾಣದಿಂದ ಪರಿಶೀಲಿಸಬಹುದಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ.

ಸಹಾಯವಾಣಿ : ಜಿಲ್ಲಾಧಿಕಾರಿಗಳ ಕಚೇರಿ ವಿಜಯಪುರ ದೂ: 08352-221261 ಹಾಗೂ ಟೋಲ್ ಫ್ರೀ ಸಂ-ಖ್ಯೆ 1077, ಉಪವಿಭಾಗಾಧಿಕಾರಿಗಳು ವಿಜಯಪುರ ದೂ: 083521-295286, ಉಪವಿಭಾಗಾಧಿಕಾರಿಗಳು ಇಂಡಿ ದೂ: 08359-225003, ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ವಿಜಯಪುರ ದೂ: 08352-250244, ತಹಶೀಲ್ದಾರ ವಿಜಯಪುರ ದೂ:08352-355731, ತಹಶೀಲ್ದಾರ ಬಬಲೇಶ್ವರ ದೂ: 8310504205, 9686073390, ತಹಶೀಲ್ದಾರ ತಿಕೋಟಾ ದೂ: 8762480811, 9480532696, ತಹಶೀಲ್ದಾರ ಬ.ಬಾಗೇವಾಡಿ ದೂ:8050426663, 9108482599, ತಹಶೀಲ್ದಾರ ನಿಡಗುಂದಿ ದೂ: 7019178075,9902634186, ತಹಶೀಲ್ದಾರ ಕೊಲ್ಹಾರ ದೂ: 08426-200252, ತಹಶೀಲ್ದಾರ ಮುದ್ದೇಬಿಹಾಳ ದೂ: 08356-220227, ತಹಶೀಲ್ದಾರ ತಾಳಿಕೋಟೆ ದೂ:9449752854, ತಹಶೀಲ್ದಾರ ಇಂಡಿ ದೂ:08359-225020, ತಹಶೀಲ್ದಾರ ಚಡಚಣ ದೂ: 9483952337,9740183529, ತಹಶೀಲ್ದಾರ ಸಿಂದಗಿ ದೂ:08488-221235, ತಹಶೀಲ್ದಾರ ದೇವರಹಿಪ್ಪರಗಿ ದೂ: 08424-283222, ತಹಶೀಲ್ದಾರ ಆಲಮೇಲ ದೂ: 7353343228 ಇದಲ್ಲದೇ ವಿಪತ್ತು ನಿರ್ವಹಣೆಗಾರರ ದೂ: 7019682740 ಸಂಖ್ಯೆಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಬೆಳೆ ಹಾನಿ ಪರಿಹಾರ ಪಡೆದುಕೊಳ್ಳಲು ಫ್ರೂಟ್ಸ್ ಐಡಿ ಕಡ್ಡಾಯವಾಗಿರುವುದರಿಂದ ಇದುವರೆಗೆ ಫ್ರೂಟ್ಸ ಐಡಿ ಮಾಡಿಕೊಳ್ಳದ ರೈತರು ಕೂಡಲೇ ತಮ್ಮ ಆಧಾರ, ಬ್ಯಾಂಕ್ ಖಾತೆ ವಿವರ ಹಾಗೂ ಪಹಣಿ ಮಾಹಿತಿಯನ್ನು ಗ್ರಾಮ ಆಡಳಿತ ಅಧಿಕಾರಿಗಳಿಗೆ ಅಥವಾ ಸಮೀಪದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಫ್ರೂಟ್ಸ್ ಐಡಿ ಮಾಡಿಕೊಳ್ಳಲು ಮನವಿ ಮಾಡಿಕೊಳ್ಳಲಾಗಿದ್ದು, ಫ್ರೂಟ್ಸ್ ಐಡಿ ಇಲ್ಲದ ರೈತರು ಪರಿಹಾರ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಿ.23ರಂದು ಹನುಮ ಜಯಂತಿ ಆಚರಣೆ

**ತಾಳಿಕೋಟೆ :** ಪಟ್ಟಣದ ಬಜಾರ ಹನುಮಾನ ದೇವಸ್ಥಾನದಲ್ಲಿ ಪ್ರತಿವರ್ಷ ಆಚರಿಸಲಾಗುತ್ತಿದ್ದ ಹನುಮಾನ ಜಯಂತ್ಯೋತ್ಸವವನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿತ್ತು ಸದರಿ ಜಯಂತ್ಯೋತ್ಸವವನ್ನು ಇದೇ ದಿ.23 ಗುರುವಾರರಂದು ಆಚರಿಸಲು ನಿರ್ಧರಿಸಲಾಗಿದೆ ಎಂದು ದೇವಸ್ಥಾನ ಕಮಿಟಿ ತಿಳಿಸಿದೆ.



ಅಂದು ಬೆಳಿಗ್ಗೆ 6 ಗಂಟೆಗೆ ತೊಟ್ಟಿಲು ಕಾರ್ಯಕ್ರಮ, 7 ಗಂಟೆಗೆ ಗಂಗಸ್ಥಳ, ಫಲ್ಲಕ್ಕಿ ಉತ್ಸವ ಕಾರ್ಯಕ್ರಮಗಳು ಜರುಗಲಿವೆ.

ನಂತರ ಮದ್ಯಾಹ್ನ ಸಮಸ್ತ ಭಕ್ತಾಧಿಗಳಿಗೆ ಮಹಾ ಪ್ರಸಾದ ಜರುಗಲಿದ್ದು ಕಾರಣ ಭಕ್ತಾಧಿಗಳು ಶ್ರೀ ಹನುಮಾನ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ಹನುಮಾನ ಕೃಪೆಗೆ ಪಾತ್ರರಾಗಬೇಕೆಂದು ಕಮಿಟಿ ತಿಳಿಸಿದೆ.

# ಹೊಸ ಪದವಿ ಮಹಾವಿದ್ಯಾಲಯ ಆರಂಭಿಸಲು ನೋಂದಾಯಿತ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ಕೊಪ್ಪಳ :** ಕೊಪ್ಪಳ ವಿಶ್ವವಿದ್ಯಾಲಯದಿಂದ 2024-25 ನೇ ಸಾಲಿಗೆ ಕೊಪ್ಪಳ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಿಂದ ಮತ್ತು ನೋಂದಾಯಿತ ಸಂಘ ಸಂಸ್ಥೆ/ಸಾರ್ವಜನಿಕ ಟ್ರಸ್ಟ್‌ಗಳಿಂದ ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಇನ್ನಿತರ ಸಾಂಪ್ರದಾಯಿಕ ವಿಷಯಗಳಲ್ಲಿ ಹೊಸ ಪದವಿಮಹಾವಿದ್ಯಾಲಯಗಳನ್ನುಆರಂಭಿಸಲು UUCMS ತಂತ್ರಾಂಶದ ಮೂಲಕ ಅರ್ಜಿ ಆಹ್ವಾನಿಸಿದೆ.

ಆಸಕ್ತನೋಂದಾಯಿತಸಂಘಸಂಸ್ಥೆ/ಟ್ರಸ್ಟ್‌ಗಳಸಂಯೋಜ-ಕರು ಮೂಲ ದಾಖಲೆಗಳೊಂದಿಗೆ ಮೇ.21 ರೊಳಗಾಗಿ ನಿಗದಿತ ಯೋಜನಾ ಶುಲ್ಕ ಪಾವತಿಸಿ ಯೋಜನೆಗಳಿಗೆ htt://uucms.Karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಪ್ರಸ್ತುತ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳಿಂದ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಿಗೆಮುಂದುವರಿಕೆ/ವಿಸ್ತರಣೆ/ಹೊಸಕೋರ್ಸ್/ ಹೊಸ ವಿಷಯ/ಸ್ನಾತಕೋತ್ತರ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ/ಮಹಾವಿದ್ಯಾಲಗಳ ಹೆಸರು ಬದಲಾವಣೆ/ಮಹಾವಿದ್ಯಾಲಯ ಸ್ಥಳಾಂತರ/ಆಡಳಿತ ಮಂಡಳಿ ಹೆಚ್ಚಳ/ಶಾಶ್ವತ ಬದಲಾವಣೆ ಹಾಗೂ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ವಿವರ, ಸಂಯೋಜಿತ ಶುಲ್ಕಗಳ ವಿವರ ಹಾಗೂ ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಾಹಿತಿಯನ್ನು ತಳಕಲ್ ಹತ್ತಿರದ ಸರಕಾರಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿರುವ ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ಭೇಟಿ ನೀಡಿ ತಿಳಿದುಕೊಳ್ಳಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ www.koppaluniversity.ac.in ದಿಂದ ಮಾಹಿತಿ ಪಡೆಯಬಹುದು ಎಂದು ವಿವಿ ಕುಲಸಚಿವರಾದ ಪ್ರೊ.ಕೆ.ವಿ. ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# “ರಾಜ್ಯಮಟ್ಟದ 2ನೇ ಕವಿ-ಕಲಾವಿದರ ಸಮ್ಮೇಳನ” “ಹಂಪಿಯಲ್ಲಿ ಕಲ್ಲಿನ ರಥ, ನಮ್ಮದು ಕನ್ನಡ ಪಥ”

**ನೆಲಮಂಗಲ :** ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಜ್ಞಾನಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು, ಜಿಲ್ಲಾ ಘಟಕ ವಿಜಯನಗರ ವತಿಯಿಂದ ಕನ್ನಡಿಗರ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯಲ್ಲಿ, ದಿನಾಂಕ 01-06-2024 ಮತ್ತು 02-06- 2024 ರಂದು "ಹಂಪಿಯಲ್ಲಿ ಕಲ್ಲಿನ ರಥ, ನಮ್ಮದು ಕನ್ನಡ ಪಥ" ಎಂಬ "ರಾಜ್ಯಮಟ್ಟದ 2ನೇ ಕವಿ-ಕಲಾವಿದರ ಸಮ್ಮೇಳನ" ವನ್ನು ಹಮ್ಮಿಕೊಳ್ಳಲಾಗಿದೆ.

ಮೇ 31ರ ಶುಕ್ರವಾರ ರಾತ್ರಿ ಹೊರಟು, ಜೂನ್ 1ರ ಶನಿವಾರ ಬೆಳಗ್ಗೆ ಹಂಪಿ ತಲುಪಿ, ಕಮಲಾಪುರದ ರೈತ ಸಮುದಾಯ ಭವನದ ಯಾತ್ರಿ ನಿವಾಸದಲ್ಲಿ ಲಘು ವಿಶ್ರಾಂತಿ ಹಾಗೂ ತಿಂಡಿಯ ನಂತರ 10 ಗಂಟೆಗೆ ವೇದಿಕೆ ಕಾರ್ಯಕ್ರಮ ಆರಂಭವಾಗುತ್ತದೆ. ಸಂಜೆ 5 ಗಂಟೆ ವರೆಗೆ ಕವಿಗೋಷ್ಠಿ, ವಿಚಾರಗೋಷ್ಠಿ, ಮಹಿಳಾ ಗೋಷ್ಠಿ ಮತ್ತು ಮಕ್ಕಳಗೋಷ್ಠಿ ಏರ್ಪಡಿಸಲಾಗಿದೆ.



ವಿವಿಧ *ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಜೂನ್ 2 ರಂದು ಪ್ರವಾಸ ಕಾರ್ಯಕ್ರಮ ಇರುತ್ತದೆ.

ಹಂಪಿಯ ಎಲ್ಲಾ ಸ್ಮಾರಕಗಳ ಇತಿಹಾಸವನ್ನು ಗೈಡ್ ಸಹಾಯದಿಂದ ಸಂಪೂರ್ಣವಾಗಿ ವಿವರಿಸಲಾಗುವುದು. ನಂತರ ಅಂಜನಾದ್ರಿ ಪರ್ವತ ಮತ್ತು ತುಂಗಭದ್ರಾ ಜಲಾಶಯಗಳನ್ನು ವೀಕ್ಷಿಸಿ, ರಾತ್ರಿ ಪ್ರಯಾಣಿಸಿ ಬೆಂಗಳೂರಿಗೆ ಹಿಂತಿರುಗುವುದು.

ಈ ಕಾರ್ಯಕ್ರಮದಲ್ಲಿ "ಹಂಪೆಯಲ್ಲಿ ಕಲ್ಲಿನ ರಥ, ನಮ್ಮದು ಕನ್ನಡ ಪಥ" ಎಂಬ ಕವನ ಸಂಕಲನವನ್ನು ಬಿಡುಗಡೆಗೊಳಿಸಲು ಯೋಜಿಸಲಾಗಿದೆ. ಆಸಕ್ತ ಕವಿಗಳೆಲ್ಲ ತಮ್ಮ ಒಂದು ಕವನ ಹಾಗೂ ಭಾವಚಿತ್ರವನ್ನು, ಕೆಳಕಂಡ ಯಾವುದಾದರೂ ಸಂಪರ್ಕ ಸಂಖ್ಯೆಗೆ ವಾಟ್ಸಪ್ ಮೂಲಕ 20.05.2024ರ ಒಳಗೆ ಕಳಿಸತಕ್ಕದ್ದು. ಹಾಗೆಯೇ ಆಸಕ್ತ ಕವಿಗಳು ತಮ್ಮ ಯಾವುದೇ ಪುಸ್ತಕ ಬಿಡುಗಡೆ ಮಾಡಲು ಇಚ್ಛಿಸಿದರೆ, ಜಗತ್ತಿನ ಇತಿಹಾಸದಲ್ಲಿಯೇ ಅಮೂಲ್ಯವಾದ ಐತಿಹಾಸಿಕ ಕುರುಹುಗಳನ್ನು ಹೊಂದಿರುವ ಹಂಪಿಯಲ್ಲಿ ಬಿಡುಗಡೆಗೊಳಿಸುವ ಅವಕಾಶವೂ ಇರುತ್ತದೆ.

ಕಾರ್ಯಕ್ರಮದಿಂದ ಬಂದ ನಂತರ, ನಿಮ್ಮ ಹಂಪಿಯ ಅನುಭವಗಳನ್ನು ಕುರಿತು "ನಾ ಕಂಡ ಹಂಪಿ" ಎಂಬ ಹೆಸರಿನ ಪ್ರವಾಸ ಕಥನ ಅಥವಾ ಲೇಖನ ಅಥವಾ ಕವನವನ್ನು ಬರೆದು ನಮಗೆ ಕಳುಹಿಸಬೇಕು.

ಅವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ಕೂಡಲೇ ನೊಂದಾಯಿಸಿಕೊಳ್ಳಿ

ಹಾಗೂ ಹೆಚ್ಚಿನ ವಿವರಗಳಿಗೆ

ಸಂಪರ್ಕಿಸಿ:

**ಮಣ್ಣೆ ಮೋಹನ್ --6360507617,**
**ಬಿ ಪ್ರಕಾಶ್ ಮೂರ್ತಿ--9342467026,**
**ಕೆ ಬಿ ಸದಾನಂದ ಆರಾಧ್ಯ-9743146044,**
**ಬಾನುಪ್ರಕಾಶ್ -9738530302,**
**ಡಾ ಯಶೋಧ --9483199394,**
**ನಂದಾದೀಪ--9035205086**

# ಮೈದುಂಬಿ ಹರಿಯುತ್ತಿರುವ ಘಟಪ್ರಭಾ



**ಮಹಾಲಿಂಗಪುರ :** ಬೆಳಗಾವಿ-ಬಾಗಲಕೋಟೆ ಜಿಲ್ಲೆಯ ಜನಜಾನುವಾರು ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ ಎರಡು ಟಿಎಂಸಿ ನೀರು ಹರಿಸಲಾಗುತ್ತಿದೆ.

ಇದರಿಂದ ಬೆಸಿಗೆಯಲ್ಲಿಯೂ ಘಟಪ್ರಭಾ ನದಿಯು ಮೈದುಂಬಿ ಹರಿಯುತ್ತಿದೆ. ಕಾರಣ ಮಹಾಲಿಂಗಪುರ ಸಮೀಪದ ನಂದಗಾಂವ ಮತ್ತು ಮಿರ್ಜಿ ಸೇತುವೆಗಳ ಮೇಲೆ ನೀರು ಹರಿಯುತ್ತಿದೆ. ಮಿರ್ಜಿಯ ಹಳೆ ಸೇತುವೆಯು ಸಂಪೂರ್ಣ ಜಲಾವೃತವಾಗಿದ್ದು. ಹೊಸ ಸೇತುವೆಯ ಮೇಲೆ ನೀರು ಹರಿಯುತ್ತಿದೆ.

# ನೀರಿಗಾಗಿ ಮಹಿಳೆಯರ ಪ್ರತಿಭಟನೆ



**ಮಹಾಲಿಂಗಪುರ :** ಸಮರ್ಪಕವಾಗಿ ನೀರು ಪೂರೈಸಬೇಕೆಂದು ಆಗ್ರಹಿಸಿ ಪಟ್ಟಣದ ಸಾಧುನಗುಡಿ ರಸ್ತೆಯ ಭಗೀರಥ ವೃತ್ತದ ಬಳಿಯ ಮಹಿಳೆಯರು ಪುರಸಭೆ ಎದುರು ಪ್ರತಿಭಟನೆ ನಡೆಸಿದರು.

ಪುರಸಭೆ ಮುಖ್ಯಾಧಿಕಾರಿ, ಸಿಬ್ಬಂದಿ ವಿರುದ್ಧ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದರು.ಕಳೆದ ಹದಿನೈದು ದಿನದಿಂದ ನೀರು ಪೂರೈಕೆ ಇಲ್ಲ. ಹಳ್ಳದ ನೀರನ್ನೇ ಬಳಸಲಾಗುತ್ತಿದೆ.ಅಧಿಕಾರಿಗಳಿಗೆ ಹೇಳಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ನೀರು ಪೂರೈಸಬೇಕು ಎಂದು ಆಗ್ರಹಿಸಿದರು.

ಸ್ಥಳದಲ್ಲಿದ್ದ ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಬಲವಂತಗೌಡ ಪಾಟೀಲ, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಮೇಲೆ ಮಹಿಳೆಯರು ಪ್ರತಿಭಟನೆ ಹಿಂಪಡೆದರು.

# ಆಸ್ಪತ್ರೆಯ ದಾದಿಯರು ಆರೋಗ್ಯದ ಭಾಗ್ಯದಾತೆಯರು: ಶಿವಲಿಂಗ ಸಿದ್ನಾಳ

**ಮಹಾಲಿಂಗಪುರ :** ಆರೋಗ್ಯವೇ ಭಾಗ್ಯ ಎನ್ನುವಂತೆ ಆಸ್ಪತ್ರೆಯ ದಾದಿಯರು ಆರೋಗ್ಯದ ಭಾಗ್ಯದಾತೆಯರು ಎಂದು ಕೆ.ಎಲ್.ಇ ಕಾಲೇಜಿನ ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ಸ್ಥಳೀಯ ಡಾ.ವಿ.ಪಿ ಕನಕರಡ್ಡಿ ಮೆಮೋರಿಯಲ್ ನರ್ಸಿಂಗ್ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ದಾದಿಯರ ದಿನಾಚರಣೆಯಲ್ಲಿ ಅವರು ಮಾತನಾಡಿ, ಯಾರು ಸೇವೆಯಲ್ಲಿ ದೇವರನ್ನು ಕಾಣುತ್ತಾರೋ ಅವರು ರೋಗಿಗಳಿಗೆ ದೇವರಾಗಿ ಕಾಣುತ್ತಾರೆ. ಇಂಥ ಅಮೂಲ್ಯ ಸೇವೆಯ ವೃತ್ತಿ ಬಗ್ಗೆ ಹೆಮ್ಮೆ ಪಡಬೇಕು ಎಂದರು.




ಠಾಣಾಧಿಕಾರಿ ಪ್ರವೀಣ ಬೀಳಗಿ ಮಾತನಾಡಿ, ಪೊಲೀಸ್ ಠಾಣೆ ಮತ್ತು ಆಸ್ಪತ್ರೆಗಳು ರಜೆಯಿಲ್ಲದ ಸದಾ ಬ್ಯುಜಿಯಾಗಿಸುವ ನಿರಂತರ ಸೇವೆಯ ವೃತ್ತಿಯಾಗಿದ್ದು, ಸಾರ್ವಜನಿಕ ಸೇವೆಗೆ ಬದ್ಧರಾಗಿರಬೇಕು ಎಂದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡ್ನಾ.ಸಿ.ಎಂ.ವಜ್ಜರಮಟ್ಟಿಮಠ ಮಾತನಾಡಿ, ವೈದ್ಯಕೀಯ ಸೇವೆ ಸರ್ವಶ್ರೇಷ್ಠ ಸೇವೆಯಾಗಿದ್ದು, ವೆಂಕಟೇಶ ಆಸ್ಪತ್ರೆ ಮೂಲಕ ಆಪ್ತ ಆರೋಗ್ಯ ಸೇವೆ ನೀಡುತ್ತಿದ್ದ ಡಾ. ಅಜಿತ ಕನಕರಡ್ಡಿ ನರ್ಸಿಂಗ್ ಕಾಲೇಜ್ ಸ್ಥಾಪಿಸುವ ಮೂಲಕ ಸಮಾಜಕ್ಕೆ ದಾದಿಯರ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಎಂದರು. ಪ್ರಾಚಾರ್ಯ ಸವಿತಾ ಹೆಬ್ಬಾಳ, ವೈಷ್ಣವಿ ಒಂಟಮೂರಿ ಮಾತನಾಡಿದರು.

ಇದಕ್ಕೂ ಮುನ್ನ ಶ್ರೇಷ್ಠ ದಾದಿ ದಿ.ಫ್ಲಾರೆನ್ಸ್ ನೈಟಿಂಗೇಲ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕ್ಯಾಂಡಲ್ ಮತ್ತು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕೇಕ್ ಕತ್ತರಿಸುವ ಮೂಲಕ ನೈಟಿಂಗೇಲ್ ಜನ್ಮದಿನದ ವಾರ್ಷಿಕೋತ್ಸವ ಆಚರಿಸಲಾಯಿತು. ವೇದಿಕೆ ಮುಂಭಾಗದಲ್ಲಿ ನರ್ಸ್ ಲೋಗೋ ಮತ್ತು ಈ ವರ್ಷದ ಥೀಮ್ ಘೋಷವಾಕ್ಯದ ಬಗ್ಗೆ ರಂಗೋಲಿ ಚಿತ್ತಾರ ಬಿಡಿಸಿ ಸ್ವಾಗತಿಸಲಾಯಿತು.

ಅಂತರ್ ಕಾಲೇಜು ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಾದ ವಾಣಿ ಉಪ್ಪಾರ, ಕವಿತಾ ಗುಡದನ್ನವರ, ಪ್ರಜ್ವಲ ತೋಟಗಿ, ಮೊಹಮ್ಮದ ಮುಧೋಳ ಅವರಿಗೆ ಅಭಿನಂದಿಸಲಾಯಿತು.

ಡಾ.ಅಜಿತ ಕನಕರಡ್ಡಿ ಅಧ್ಯಕ್ಷತೆ ವಹಿಸಿದ್ದರು.

ಉಪನ್ಯಾಸಕರಾದ ಆನಂದ, ವಿನಾಯಕ, ಸವಿತಾ, ಸಂಗೀತಾ, ಶಿವಾನಂದ ಇದ್ದರು. ಕವಿತಾ, ಉಮಾ ಪ್ರಾರ್ಥನೆ ಹಾಡಿದರು. ವಾಣಿ ಉಪ್ಪಾರ ಸ್ವಾಗತಿಸಿದರು. ಧೃತಿ, ಗಂಗಾಧರ ನಿರೂಪಿಸಿದರು. ಯಶೋಧಾ ವಂದಿಸಿದರು.

## ತಾಯಿ ಹಾಗೂ ಮೂವರು ಮಕ್ಕಳ ಪತ್ತೆಗೆ ಮನವಿ

**ವಿಜಯಪುರ:**ಕೊಲ್ಹಾರಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಂದ್ರಭಾಗಾ ವಿಠ್ಠಲ ಹುಗ್ಗೆನವರ(30 ವರ್ಷ) ಹಾಗೂ ಆಕೆಯ ಮಕ್ಕಳಾದ ಫ್ರಥಮ(11 ವರ್ಷ), ಸಜನಿ(9 ವರ್ಷ), ಸಾನವಿ(7 ವರ್ಷ) ರವರನ್ನು ಅಪಹರಣ ಮಾಡಲಾಗಿದೆ ಎಂದು ದೂರು ದಾಖಲಾಗಿದೆ. ಅಬ್ದುಲ್‌ಗಫಾರ ನೂರಲಿಖಾನ ಕಲಾದಗಿ ಎಂಬ ವ್ಯಕ್ತಿಯು ತಾಯಿ ಮಕ್ಕಳನ್ನು ಅಪಹರಣ ಮಾಡಿದ್ದಾನೆ ಎಂದು ಅಪಹರಣಗೊಂಡ ಮಹಿಳೆಯ ಚಿಕ್ಕಪ್ಪನಾದ ಲಕ್ಷ್ಮಣ ಬಸಲಿಂಗಪ್ಪ ಬ್ಯಾಲ್ಯಾಳ ಇವರು ದೂರು ದಾಖಲಿಸಿದ್ದಾರೆ.

ಅಪಹರಣಗೊಂಡ ತಾಯಿ ಹಾಗೂ ಮಕ್ಕಳ ಬಗ್ಗೆ ಸುಳಿವು ಅಥವಾ ಗುರುತು ಪತ್ತೆಯಾದಲ್ಲಿ ಹತ್ತಿರದ ಪೊಲೀಸ್ ಠಾಣೆ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಕಚೇರಿ 08352-250152 ಮೊಬೈಲ್ ಸಂಖ್ಯೆ 9480804201, ವಿಜಯ ಪುರ ಕಂಟ್ರೋಲ್ ರೂಮ್ ನಂ. 08352-250844,250751, ಡಿಎಸ್‌ಪಿ ಬಸವನ ಬಾಗೇವಾಡಿ ಇವರ ಮೊಬೈಲ್ ನಂಬರ್ 9480804221 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಬಸವನ ಬಾಗೇವಾಡಿಯ ಪೊಲೀಸ್ ಉಪ ವಿಭಾಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಲ್ಲಪ್ಪ ಬೆಳಕೂಡ ನಿಧನ



**ಮೂಡಲಗಿ :** ತಾಲ್ಲೂಕಿನ ಕಲ್ಲೋಳಿಯ ಮಲ್ಲಪ್ಪ ಬಸಪ್ಪ ಬೆಳಕೂಡ (69) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂದು, ಬಳಗವನ್ನು ಅಗಲಿದ್ದಾರೆ.

# ಭೀಕರ ಮಳೆಗೆ ಭಕ್ತರ ಪರದಾಟ

**ಚಿಮ್ಮಡ :** ಮಂಗಳವಾರ ರಾತ್ರಿ ಸುರಿದ ಜೋರು ಮಳೆಯಿಂದ ಈ ಭಾಗದ ವಾತಾವರಣ ತಂಪೆರೆದಂತಾಗಿದ್ದು ರೈತರು ಹರ್ಷವ್ಯಕ್ತಪಡಿಸಿದ್ದಾರೆ. ಆದರೆ ಗ್ರಾಮದಲ್ಲಿ ನಡೆಯುತ್ತಿರುವ ಮೂರು ಮುಖದವ್ವದೇವಿ ಜಾತ್ರೆಗೆ ಆಗಮಿಸಿದ ಭಕ್ತರು ಹೈರಾಣಾಗಿದ್ದಾರೆ.

ರಾತ್ರಿ 8.00ಘಂ. ಯಿಂದ ಸುಮಾರು 3 ಘಂ.ಗಳ ಕಾಲ ಸುರಿದ ಮಳೆಯಿಂದಾಗಿ ಗ್ರಾಮದಲ್ಲಿ ಮೂರು ವರ್ಷಗಳಿಗೊಮ್ಮೆ ನಡೆಯುವ ಬ್ರಹತ್ ಜಾತ್ರೆ ಅಸ್ತವ್ಯಸ್ಥಗೊಂಡಿದೆ, ಎತ್ತಿನಬಂಡಿ, ಟ್ರ್ಯಾಕ್ಟರ್ ಮುಂತಾದ ವಾಹನಗಳಲ್ಲಿ ಅಡುಗೆ ಸಾಮಗ್ರಿಗಳೊಂದಿಗೆ ಆಗಮಿಸಿದ ಸಾವಿರಾರು ಜನ ಭಕ್ತಾಧಿಗಳು ಈ ಅಕಾಲಿಕ ಮಳೆಯಿಂದ ಪರಿತಪಿಸುವಂತಾಯಿತು.

ಅವರ ವಸತಿಗಾಗಿ ಹಾಕಿದ ಶಾಮಿಯಾಣ ಕಿತ್ತು ಹೋದ ಪರಿಣಾಮ ಭಕ್ತರು ಶಾಲೆ, ಮಠ, ಮಂದಿರಗಳಲ್ಲಿ ಆಶ್ರಯ ಪಡೆದರು, ರಾತ್ರಿಯಿಡೀ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಸೊಳ್ಳೆಗಳ ಕಾಟದಿದಾಗಿ ಗ್ರಾಮಸ್ಥರು ಜಾಗರಣೆ ಮಾಡುವಂತಾಯಿತು,





ಆದರೆ ವ್ಯಾಪಾರಿಗರು ನಮಗೆ ಹಾನಿಯಾದರೂ ಪರವಾಗಿಲ್ಲ ಮಳೆಯಾಗಿದ್ದು ತುಂಬಾ ಖುಷಿಯಾಗಿದೆ, ಮೂರುಮಕದವ್ವ ಈ ಮಳೆ ಮೂಲಕ ನಮಗೆಲ್ಲ ಆಶೀರ್ವದಿಸಿದ್ದಾರೆಂದು ವ್ಯಾಪಾರಿ ಮಂಜುನಾಥ ತೊರವಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕಳೆದ ಹಲವು ದಿನಗಳಿಂದ ಈ ಭಾಗದಲ್ಲಿ ಮಳೆಯಿಲ್ಲದೇ ಹಲವಾರು ಕೊಳವೆ ಬಾವಿಗಳು ಕೈಕೊಟ್ಟಿದ್ದರ ಪರಿಣಾಮ ಈ ಭಾಗದಲ್ಲಿ ಹಲವೆಡೆ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಪರದಾಡುವಂತಾಗಿತ್ತು ರಾತ್ರಿ ಸುರಿದ ಮಳೆಯಿಂದ ವಾತಾವರಣ ತಂಪಾಗಿದ್ದು ಅಂತರ್ಜಲ ಮಟ್ಟ ಹೆಚ್ಚುವ ಸಾಧ್ಯತೆಯಿದೆಯಂದು ಹಲವಾರು ರೈತರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ಈ ಭಾಗದಲ್ಲಿ ಸುರಿದ ಕೃತಿಕಾ ಮಳೆಗೆ ಸಾರ್ವಜನಿಕರು ರೈತರು ಖುಷಿಯಾಗಿದ್ದು ತಮ್ಮ ಬಿತ್ತನೆ ಕಾರ್ಯಕ್ಕೆ ಭುಮಿಯನ್ನು ಹದಗೊಳಿಸಿ ಮಳೆಗಾಗಿ ಕಾಯುತಿದ್ದ ರೈತರಿಗೆ ಈ ಮಳೆ ವರದಾನವಾಗಿದೆ.

# ಯಲಬುರ್ಗಾ ತಾಲ್ಲೂಕಿನ ಜೆ.ಜೆ.ಎಂ ಕಾಮಗಾರಿ ಕುರಿತು ಸ್ಪಷ್ಟೀಕರಣ




**ಕೊಪ್ಪಳ :** ಯಲಬುರ್ಗಾ ತಾಲೂಕಿನ ವ್ಯಾಪ್ತಿಯ ಜೆ.ಜೆ. ಎಮ್ ಕಾಮಗಾರಿಯ ಕುರಿತು ಪತ್ರಿಕೆಯೊಂದರಲ್ಲಿ ಜೆ.ಜೆ.ಎಮ್ ಅದ್ವಾನ, ಅನುದಾನ ದುರ್ಬಳಕೆ ಶಿರ್ಷಿಕೆಯಲ್ಲಿ ಪ್ರಕಟವಾದ ವರದಿ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಸಹಾಯಕಕಾರ್ಯಪಾಲಕಅಭಿಯಂತರರು ವರದಿ ಕುರಿತು ಸ್ಪಷ್ಟೀಕರಣ ನೀಡಿದ್ದಾರೆ.

ಯಲಬುರ್ಗಾ ತಾಲೂಕಿನ ಯಡೋಣಿ, ಕುಡಗುಂಟಿ, ಗೆದ್ದಿಗೇರಿ ತಾಂಡಾ, ಕಲ್ಲಭಾವಿ, ಪುಟಗಮರಿ ಗ್ರಾಮ ಸೇರಿದಂತೆ ಈಗಾಗಲೇ ತಾಲೂಕಿನಾದ್ಯಂತ 153 ಹಳ್ಳಿಗಳಲ್ಲಿ ಜೆ.ಜೆ.ಎಮ್ ಕಾಮಗಾರಿ ಪ್ರಗತಿಯಲ್ಲಿದ್ದು, 32 ಗ್ರಾಮಗಳಲ್ಲಿ ಕಾಮಗಾರಿಯನ್ನು ಸಂಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಳಿಸಿ, ಆಯಾ ಗ್ರಾಮ ಪಂಚಾಯತಗಳಿಗೆ ಹಸ್ತಾಂತರ ಮಾಡಲಾಗಿದೆ. ಇನ್ನುಳಿದ 92 ಕಾಮಗಾರಿಗಳು ಶೇ.100 ರಷ್ಟು ಮುಗಿದಿದ್ದು ಹಸ್ತಾಂತರ ಪ್ರಕ್ರಿಯಲ್ಲಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗದ ಶಾಖಾಧಿಕಾರಿಗಳು, ಎಇಇ, ಗುತ್ತಿಗೆದಾರರ ಸಮೇತ ಗ್ರಾಮಗಳಿಗೆ ಭೇಟಿ ನೀಡಿದ್ದು, ಗೆದ್ದಿಗೇರಿ ತಾಂಡಾ, ತಳಕಲ್, ಕಲ್ಲಭಾವಿ, ಸೇರಿ ಇನ್ನುಳಿದ 29 ಕಾಮಗಾರಿಗಳು Varition Estimation ಅಧೀಕ್ಷಕ ಅಭಿಯಂತರರ ಮೂಲಕ ಅನುಮೋದನೆಪಡೆದಿದ್ದು,ಹೆಚ್ಚುವರಿ ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತದೆ.

ಹಾಗೂ ಎಲ್ಲಾ ಮುಕ್ತಾಯಗೊಂಡ ಕಾಮಗಾರಿಗಳಿಗೆ ನಾಮಫಲಕ ಕಡ್ಡಾಯವಾಗಿ ಅಳವಡಿಸಲು ಸೂಚಿಸಲಾಗಿರುತ್ತದೆ.

ಹಾಗೂ ಎಲ್ಲಾ ಜೆ.ಜೆ.ಎಮ್ ಕಾಮಗಾರಿಗಳ ಪರಿವೀಕ್ಷಣೆಗಳನ್ನು Sqm, Dam, Third Party ತಂಡಗಳ ಮುಖಾಂತರ ಗುಣಮಟ್ಟ ಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಖಚಿತಪಡಿಸಿದ ನಂತರ ಬಿಲ್ಲುಗಳನ್ನುಪಾವತಿಸಲಾಗುತ್ತಿದೆಎಂದುಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರಸಭೆ ಪೌರಕಾರ್ಮಿಕ ಸಾಧಕ ಮಕ್ಕಳಿಗೆ ಸನ್ಮಾನ

**ಮಹಾಲಿಂಗಪುರ :** ಪಟ್ಟಣದ ಪುರಸಭೆಯಲ್ಲಿ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ಚಂದ್ರವ್ವಾ ಹಣಮಂತ ಮನ್ನಾಪಗೋಳ ಅವರ ಪುತ್ರಿ, ಹೊಸೂರ ಜಿಎಚ್‌ಎಸ್ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಮಂಜುಳಾ ಮನ್ನಾಪಗೋಳ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 568 ಅಂಕಗಳೊಂದಿಗೆ ಶೇ.91ರಷ್ಟು ಫಲಿತಾಂಶ ಹಾಗೂ ಕಲ್ಪನಾ ರವಿ ಮಳಲಿ ಅವರ ಪುತ್ರ ಸಾಬು ರವಿ ಮಳಲಿ ಶೇ.65.44 ಅಂಕಗಳನ್ನು ಪಡೆದ ಸಾಧಕ ವಿದ್ಯಾರ್ಥಿಗಳನ್ನು ಪುರಸಭೆ ವತಿಯಿಂದ ಬುಧವಾರ ಸನ್ಮಾನಿಸಲಾಯಿತು.



ಪುರಸಭೆ ವ್ಯವಸ್ಥಾಪಕ ಎಸ್.ಎನ್.ಪಾಟೀಲ ಮಾತನಾಡಿ ಪೌರ ಕಾರ್ಮಿಕ ಕೆಲಸ ಮಾಡುವವರ ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದದ್ದು ಹೆಮ್ಮೆಯ ಸಂಗತಿಯಾಗಿದೆ. ವಿದ್ಯಾರ್ಥಿಗಳ ಭವಿಷ್ಯದ ಶೈಕ್ಷಣೀಕ ಜೀವನ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಪುರಸಭೆ ಲೇಖಪಾಲಕ ವ್ಹಿ.ಜಿ.ಕುಲಕರ್ಣಿ, ಸಿಬ್ಬಂದಿ ರವಿ ಹಲಸಪ್ಪಗೋಳ ಮಾತನಾಡಿ ಪೌರ ಕಾರ್ಮಿಕರ ಮಕ್ಕಳು ಪೌರಕಾರ್ಮಿಕರಾಗುವದು ಬೇಡ, ಉತ್ತಮ ಶಿಕ್ಷಣ ಪಡೆದು ಉನ್ನತ ಅಧಿಕಾರಿಗಳಾಗಲಿ ಎಂದು ಶುಭ ಹಾರೈಸಿದರು.

ಆರೋಗ್ಯ ನಿರೀಕ್ಷಕ ಎಂ.ಎಂ.ಮೂಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕರಾದ ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಎಸ್.ಎಂ.ಕಲಬುರ್ಗಿ, ಬಿ.ವೈ.ಮರದಿ, ಸಿ.ಎಸ್.ಮಠಪತಿ, ಎಂ.ಕೆ.ದಳವಾಯಿ, ವಿಕ್ರಂ ಹವಾಲ್ದಾರ, ರಾಜೇಶ್ವರಿ ಸೋರಗಾಂವಿ, ಎಸ್.ಎಂ.ಮುಲ್ಲಾ, ಚಂದ್ರು ಚಿತ್ತರಗಿ, ಲಕನ್ ದೊಡಮನಿ, ಪರಶುರಾಮ ಬಂಡಿವಡ್ಡರ, ರಾಮು ಮಾಂಗ, ಮಹಾಲಿಂಗ ಮಾಂಗ, ಲಕ್ಷ್ಮೀಬಾಯಿ ಪರೀಟ, ಮಂಜುಳಾ ಬಂಡಟಿವಡ್ಡರ, ಹಿರಿಯರಾದ ರಾಮಣ್ಣ ಹಟ್ಟಿ, ರಮೇಶ ಲಾತೂರ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

# ಶ್ರೀ ಶಂಕರಾಚಾರ್ಯರ ಜಯಂತಿ: ಜಿಲ್ಲಾಡಳಿತದಿಂದ ಪುಷ್ಪ ನಮನ ಸಲ್ಲಿಕೆ



**ಕೊಪ್ಪಳ :** ಶ್ರೀ ಶಂಕರಾಚಾರ್ಯ ಜಯಂತಿ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಶಂಕರಾಚಾರ್ಯರ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ ಅವರು ಪುಷ್ಪ ನಮನ ಸಲ್ಲಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರಮೇಶ ಪದಕಿ, ರವಿ ಪುರೋಹಿತ, ಸತ್ಯನಾರಾಯಣ ಕುಲಕರ್ಣಿ, ನಾಗರಾಜ ಎಲ್ ದೇಸಾಯಿ, ರಮೇಶ ದೀಕ್ಷಿತ್, ಶಿಕ್ಷಣ ಇಲಾಖೆಯ ಅಯ್ಯನಗೌಡ, ಅಬಕಾರಿ ಇಲಾಖೆಯ ಇಸ್ಮಾಯಿಲ್, ವಾರ್ತಾ ಇಲಾಖೆಯ ಎಂ.ಪಾಂಡುರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಂಕರ ಮತ್ತು ಮತ್ತಣ್ಣ ಹಾಗೂ ಮತ್ತಿತರರಿದ್ದರು.

**“SIHI KAHI”** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State